Re. No.D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**

( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.


सं–1 नई दिल्ली, सोमवार, मे 5 -1997 वैशाख 15, 1919 (शक) खन्ड–16
No. 1 New Delhi, Monday, May 5, 1997 Vaishakha 15, 1919 (Saka) Vol. 16
ಸಂಖ್ಯೆ ೧ ನವದೆಹಲಿ, ಸೋಮವಾರ, ಮೇ ೫, ೧೯೯೭ ವೈಶಾಖ ೧೫, ೧೯೧೯ (ಶಕ) ಸಂಪುಟ ೧೬


## Ministry of Law, Justice & Company Affairs

(Legislative Department)

New Delhi, December 25, 1995

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

(ವಿಧಾಯೀ ಇಲಾಖೆ)

ನವದೆಹಲಿ, 25ನೇ ಡಿಸೆಂಬರ್ 1995

The Translation in Kannada of the following Acts, namely—(1) The Employers Liability Act, 1938 (2) The Drugs (Control) Act, 1950 (3) The Weekly Holiday Act, 1942 (4) The All India Council for Technical Education Act, 1987 (5) The Hindu Succession Act, 1956 (6) The Additional Duties of Excise (Textiles and Textile Articles) Act, 1978 (7) The Bureau of Indian Standerds Act, 1986 (8) The Provident Funds Act, 1925 and (9) The Indian Divorce Act, 1869 are hereby published under the authority of the President and shall be deemed to be authoritative texts thereof in Kannada under clause (a) of Section (2) of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ—(1) ನಿಯೋಜಕ ಹೊಣೆಗಾರಿಕೆ ಅಧಿನಿಯಮ, 1938 (2) ಔಷಧ (ನಿಯಂತ್ರಣ) ಅಧಿನಿಯಮ, 1950 (3) ವಾರದ ರಜಾ ದಿನ ಅಧಿನಿಯಮ, 1942 (4) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 (5) ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 (6) ಅಧಿಕ ಉತ್ಪಾದನಾ ಶುಲ್ಕ (ಜವಳಿ ಮತ್ತು ಜವಳಿ ವಸ್ತು) ಅಧಿನಿಯಮ, 1978 (7) ಭಾರತೀಯ ಮಾನಕ ಸಂಸ್ಥೆ ಅಧಿನಿಯಮ, 1986 (8) ಭವಿಷ್ಯ ನಿಧಿ ಅಧಿನಿಯಮ, 1925 ಮತ್ತು (9) ಭಾರತ ವಿವಾಹ ವಿಚ್ಛೇದನ ಅಧಿನಿಯಮ, 1869— ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ (1973ರ 50) 2ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಭಾರತೀಯ ಮಾನಕ ಸಂಸ್ಥೆ ಅಧಿನಿಯಮ, 1986
## (1986 ರ 63)

ಸರಕುಗಳ ಮಾನಕೀಕರಣ, ಗುರುತು ಹಾಕುವಿಕೆ ಮತ್ತು ಗುಣಮಟ್ಟ ಪ್ರಮಾಣೀಕರಣ ಚಟುವಟಿಕೆಗಳ ಸಮಂಜಸ ಅಭಿವೃದ್ಧಿಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಆನುಷಂಗಿಕವಾದ ವಿಷಯಗಳಿಗಾಗಿ ಒಂದು ಸಂಸ್ಥೆಯ ಸ್ಥಾಪನೆಗೆ ಉಪಬಂಧಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ–I
### ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**– (1)ಈ ಅಧಿನಿಯಮವನ್ನು ಭಾರತೀಯ ಮಾನಕ ಸಂಸ್ಥೆ ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ವಸ್ತು" ಎಂದರೆ (ಮಾನಕೀಕರಣ ಮತ್ತು ಗುರುತು ಹಾಕುವುದಕ್ಕೆ ಸಂಬಂಧಿಸಿದಂತೆ) ಕೃತಕ ಅಥವಾ ಸ್ವಾಭಾವಿಕ ಅಥವಾ ಭಾಗಶಃ ಕೃತಕ ಅಥವಾ ಭಾಗಶಃ ಸ್ವಾಭಾವಿಕ, ಭಾಗಶಃ ಅಥವಾ ಸಂಪೂರ್ಣ ಸಂಸ್ಕರಿಸಿದ ಅಥವಾ ತಯಾರಿಸಿದ ಯಾವುದೇ ಪದಾರ್ಥ;

(ಬಿ) "ಸಂಸ್ಥೆ" ಎಂದರೆ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತೀಯ ಮಾನಕಗಳ ಸಂಸ್ಥೆ;

(ಸಿ) "ಬಳಕೆದಾರ" ಎಂದರೆ ಯಾವುದೇ ವಸ್ತು ಅಥವಾ ಸಂಸ್ಕರಣದ ಬಳಕೆದಾರ;

(ಡಿ) "ಮುಚ್ಚಳ" ಎಂಬುದು ಯಾವುದೇ ಬಿರಡೆ, ಪೀಪಾಯಿ, ಬಾಟಲು, ಪಾತ್ರೆ, ಪೆಟ್ಟಿಗೆ, ತೆರಪು ಪೆಟ್ಟಿಗೆ, ಆಚ್ಛಾದನೆ, ಪೊರೆಯ ಚೀಲ, ಭರಣಿ, ಚೌಕಟ್ಟು, ಹೊದಿಕೆ ಅಥವಾ ಇತರ ಧಾರಕ;

(ಇ) "ಕಾರ್ಯಕಾರಿ ಸಮಿತಿ" ಎಂದರೆ 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ಕಾರ್ಯಕಾರಿ ಸಮಿತಿ;

(ಎಫ್) "ನಿಧಿ" ಎಂದರೆ 18ನೇ ಪ್ರಕರಣದ ಮೇರೆಗೆ ರಚಿಸಲಾದ ನಿಧಿ;

(ಜಿ) "ಭಾರತೀಯ ಮಾನಕ" ಎಂದರೆ ಗುಣಮಟ್ಟ ಸೂಚಕವಾಗಿ, ಯಾವುದೇ ವಸ್ತು ಅಥವಾ ಸಂಸ್ಕರಣಕ್ಕೆ ಸಂಬಂಧಿಸಿದಂತೆ ಸಂಸ್ಥೆಯು ಸ್ಥಾಪಿಸಿದ ಮತ್ತು ಪ್ರಕಟಿಸಿದ (ಯಾವುದೇ ಪರೀಕ್ಷಾರ್ಥ ಅಥವಾ

ತಾತ್ಕಾಲಿಕ ಮಾನಕವು ಸೇರಿ) ಮಾನಕ ಮತ್ತು ಅಂಥ ವಸ್ತು ಅಥವಾ ಸಂಸ್ಕರಣದ ನಿರ್ದಿಷ್ಟ ವಿವರಗಳು ಮತ್ತು ಅದು–

(i) 10ನೇ ಪ್ರಕರಣದ (ಬಿ) ಖಂಡದ ಮೇರೆಗೆ ಸಂಸ್ಥೆಯು ಅಂಗೀಕರಿಸಿದ ಯಾವುದೇ ಮಾನಕವನ್ನು; ಮತ್ತು

(ii) ಭಾರತೀಯ ಮಾನಕಗಳ ಸಂಸ್ಥೆಯು ಸ್ಥಾಪಿಸಿ ಪ್ರಕಟಿಸಿದ ಅಥವಾ ಅಂಗೀಕರಿಸಿದ ಮತ್ತು ಸಂಸ್ಥೆಯ ಸ್ಥಾಪನೆಯ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಯಾವುದೇ ಮಾನಕವನ್ನು

– ಒಳಗೊಳ್ಳುತ್ತದೆ;

(ಹೆಚ್) "ಭಾರತೀಯ ಮಾನಕಗಳ ಸಂಸ್ಥೆ" ಎಂದರೆ ಈ ಹಿಂದೆ ಇದ್ದ ಭಾರತ ಸರ್ಕಾರದ ಕೈಗಾರಿಕೆಗಳ ಮತ್ತು ಸರಬರಾಜುಗಳ ಇಲಾಖೆಯ ನಿರ್ಣಯ ಸಂ. 1ಎಸ್‌ಡಿಡಿ (4)/45 ದಿನಾಂಕ 3ನೇ ಸೆಪ್ಟೆಂಬರ್ 1946ರ ಮೇರೆಗೆ ಸ್ಥಾಪಿಸಲಾದ ಮತ್ತು ಸಂಘಗಳ ನೋಂದಣಿ ಅಧಿನಿಯಮ, 1860 (1860ರ 21) ರ ಮೇರೆಗೆ ನೋಂದಾಯಿಸಲಾದ ಭಾರತೀಯ ಮಾನಕಗಳ ಸಂಸ್ಥೆ;

(ಐ) "ಪರಿಶೀಲನಾಧಿಕಾರಿ" ಎಂದರೆ 25ನೇ ಪ್ರಕರಣದ ಮೇರೆಗೆ ನೇಮಕ ಮಾಡಲಾದ ಪರಿಶೀಲನಾಧಿಕಾರಿ;

(ಜೆ) "ಲೈಸೆನ್ಸ" ಎಂದರೆ ಭಾರತೀಯ ಮಾನಕಕ್ಕೆ ಅನುರೂಪವಾಗಿರುವ ಯಾವುದೇ ವಸ್ತು ಅಥವಾ ಸಂಸ್ಕರಣಕ್ಕೆ ಸಂಬಂಧಿಸಿ ಭಾರತೀಯ ಮಾನಕಗಳ ಪ್ರಮಾಣೀಕರಣ ಗುರುತನ್ನು ಉಪಯೋಗಿಸಲು 15ನೇ ಪ್ರಕರಣದ ಮೇರೆಗೆ ನೀಡಲಾದ ಒಂದು ಲೈಸೆನ್ಸು ಮತ್ತು ಅದರಲ್ಲಿ ಭಾರತೀಯ ಮಾನಕಗಳ ಸಂಸ್ಥೆ (ಪ್ರಮಾಣೀಕರಣ ಗುರುತುಗಳ) ಅಧಿನಿಯಮ, 1952 (1952ರ 36)ರ ಮೇರೆಗೆ ನೀಡಲಾದ ಮತ್ತು ಸಂಸ್ಥೆಯ ಸ್ಥಾಪನೆಯ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಯಾವುದೇ ಲೈಸೆನ್ಸನ್ನು ಒಳಗೊಳ್ಳುತ್ತದೆ;

(ಕೆ) "ತಯಾರಿಕ" ಎಂದರೆ ಯಾವುದೇ ವಸ್ತು ಅಥವಾ ಸಂಸ್ಕರಣದ ತಯಾರಕ;

(ಎಲ್) "ಗುರುತು" ಇದರಲ್ಲಿ ಸಾಧನ, ಮುದ್ರೆ, ಶೀರ್ಷಿಕೆ, ಲೇಬಲ್ಲು, ಟಿಕೆಟ್ಟು, ಸಚಿತ್ರ ನಿರೂಪಣೆ, ಹೆಸರು, ಸಹಿ, ಪದ, ಅಕ್ಷರ ಅಥವಾ ಸಂಖ್ಯೆ ಅಥವಾ ಅವುಗಳ ಯಾವುದೇ ಸಂಯೋಜನೆಯು ಒಳಗೊಳ್ಳುತ್ತದೆ;

(ಎಂ) "ಸದಸ್ಯ" ಎಂದರೆ ಸಂಸ್ಥೆಯ ಒಬ್ಬ ಸದಸ್ಯ;

(ಎನ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಒ) "ಸಂಸ್ಕರಣ" ಇದರಲ್ಲಿ ಯಾವುದೇ ವಸ್ತುವಿನ ತಯಾರಿಕೆಯ ಸ್ವರೂಪ, ಸಂಸ್ಕರಣೆ ಮತ್ತು ವಿಧಾನ ಇವು ಒಳಗೊಳ್ಳುತ್ತವೆ;

(ಪಿ) "ನೋಂದಣಿ ಪ್ರಾಧಿಕಾರ" ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಯಾವುದೇ ಕಂಪನಿ, ಫರ್ಮ್ ಅಥವಾ ವ್ಯಕ್ತಿಗಳ ಇತರ ನಿಕಾಯವನ್ನು ಅಥವಾ ಯಾವುದೇ

ವ್ಯಾಪಾರದ ಗುರುತು ಅಥವಾ ವಿನ್ಯಾಸವನ್ನು ನೋಂದಾಯಿಸಲು ಅಥವಾ ಒಂದು ಪೇಟೆಂಟನ್ನು ನೀಡಲು ಸಕ್ಷಮವಾದ ಯಾವುದೇ ಪ್ರಾಧಿಕಾರ;

(ಕ್ಯೂ) "ವಿನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ಸಂಸ್ಥೆಯು ರಚಿಸಿದ ವಿನಿಯಮಗಳು;

(ಆರ್) "ನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳು;

(ಎಸ್) "ನಿರ್ದಿಷ್ಟ ವಿವರಣೆ" ಎಂದರೆ ಒಂದು ವಸ್ತು ಅಥವಾ ಸಂಸ್ಕರಣವನ್ನು ಇತರ ಯಾವುದೇ ವಸ್ತು ಅಥವಾ ಸಂಸ್ಕರಣದಿಂದ ವಿಭಿನ್ನವೆಂದು ತೋರಿಸಲು ಅದರ ಸ್ವರೂಪ, ಗುಣಮಟ್ಟ, ಬಲ, ಶುದ್ಧತೆ, ಸಂರಚನೆ, ಪರಿಮಾಣ, ಉದ್ದಗಲಗಳು, ತೂಕ, ಶ್ರೇಣಿ, ಬಾಳಿಕೆ, ಮೂಲ, ವಯಸ್ಸು, ಮೂಲ ಸಾಮಗ್ರಿ, ತಯಾರಿಕಾ ವಿಧಾನ ಅಥವಾ ಇತರ ವೈಶಿಷ್ಟ್ಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಲ್ಲೇಖಿಸುತ್ತಾ ನೀಡುವ ವರ್ಣನೆ;

(ಟಿ) "ಮಾನಕ ಗುರುತು" ಎಂದರೆ ಒಂದು ನಿರ್ದಿಷ್ಟ ಭಾರತೀಯ ಮಾನಕವನ್ನು ನಿರೂಪಿಸಲು ಸಂಸ್ಥೆಯು ನಿರ್ದಿಷ್ಟಪಡಿಸಿದ ಭಾರತೀಯ ಮಾನಕಗಳ ಸಂಸ್ಥೆಯ ಪ್ರಮಾಣೀಕರಣ ಗುರುತು ಮತ್ತು ಅದರಲ್ಲಿ ಭಾರತೀಯ ಮಾನಕಗಳ ಸಂಸ್ಥೆಯು ನಿರ್ದಿಷ್ಟಪಡಿಸಿದ ಯಾವುದೇ ಭಾರತೀಯ ಮಾನಕಗಳ ಸಂಸ್ಥೆಯ ಪ್ರಮಾಣೀಕರಣ ಗುರುತು ಕೂಡ ಒಳಗೊಳ್ಳುತ್ತದೆ;

(ಯು) "ವ್ಯಾಪಾರ ಗುರುತು" ಎಂದರೆ ವ್ಯಾಪಾರದ ಕ್ರಮದಲ್ಲಿ ಸರಕುಗಳು ಮತ್ತು ಗುರುತನ್ನು ಉಪಯೋಗಿಸಲು ಮಾಲೀಕನಾಗಿ ಅಥವಾ ನೋಂದಾಯಿತ ಅನುಭೋಗದಾರನಾಗಿ ಹಕ್ಕುಳ್ಳ ಒಬ್ಬ ವ್ಯಕ್ತಿಯ ನಡುವಿನ ಸಂಪರ್ಕವನ್ನು, ಆ ವ್ಯಕ್ತಿಯ ಗುರುತಿನ ಯಾವುದೇ ಸೂಚನೆಯೊಂದಿಗೆ ಅಥವಾ ಸೂಚನೆಯಿಲ್ಲದೆ, ಸೂಚಿಸುವ ಉದ್ದೇಶಕ್ಕಾಗಿ ಅಥವಾ ಸೂಚಿಸುವಂತೆ ಸರಕುಗಳ ಸಂಬಂಧದಲ್ಲಿ ಉಪಯೋಗಿಸಿದ ಅಥವಾ ಉಪಯೋಗಿಸಲು ಉದ್ದೇಶಿಸಿದ ಒಂದು ಗುರುತು;

(ವಿ) "ಒಂದು ವಸ್ತುವಿಗೆ ಮಾನಕ ಗುರುತಿನಿಂದ ಗುರುತು ಹಾಕಲಾಗಿದ್ದರೆ, ಅಥವಾ ಅಂಥ ವಸ್ತುವನ್ನು ಒಳಗೊಂಡ ಯಾವುದೇ ಆಚ್ಛಾದನೆಗೆ ಅಥವಾ ಅಂಥ ವಸ್ತುವಿಗೆ ಅಂಟಿಸಿದ ಲೇಬಲ್ಲಿಗೆ ಒಂದು ಮಾನಕ ಗುರುತಿನಿಂದ ಗುರುತು ಹಾಕಲಾಗಿದ್ದರೆ, ಆ ವಸ್ತು ಗುರುತು ಹಾಕಲ್ಪಟ್ಟಿದೆಯೆಂದು ಹೇಳಲಾಗುತ್ತದೆ.

## ಅಧ್ಯಾಯ–II
## ಭಾರತೀಯ ಮಾನಕಗಳ ಸಂಸ್ಥೆ

**3. ಭಾರತೀಯ ಮಾನಕಗಳ ಸಂಸ್ಥೆಯ ಸ್ಥಾಪನೆ ಮತ್ತು ನಿಗಮನ.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ ಭಾರತೀಯ ಮಾನಕಗಳ ಸಂಸ್ಥೆ ಎಂದು ಕರೆಯಲಾಗುವ ಒಂದು ಸಂಸ್ಥೆಯನ್ನು, ಈ ಸಂಬಂಧವಾಗಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಸ್ಥಾಪಿಸತಕ್ಕದ್ದು.

(2) ಸಂಸ್ಥೆಯು ಮೇಲೆ ಹೇಳಿದ ಹೆಸರುಳ್ಳ ಶಾಶ್ವತ ಉತ್ತರಾಧಿಕಾರ ಮತ್ತು ಒಂದು ಸಾಮಾನ್ಯ ಮೊಹರನ್ನು ಹೊಂದಿರುವ ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು, ಧಾರಣ ಮಾಡಲು ಮತ್ತು ವಿನಿಯೋಗ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಆ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಸಂಸ್ಥೆಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಸಂಸ್ಥೆಯ ಆಡಳಿತದ ನಿಯಂತ್ರಣವನ್ನು ಹೊಂದಿರುವ ಕೇಂದ್ರ ಸರ್ಕಾರದ ಮಂತ್ರಾಲಯ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಮಂತ್ರಿ ಮತ್ತು ಅವನು ಸಂಸ್ಥೆಯ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು.

(ಬಿ) ಸಂಸ್ಥೆಯ ಆಡಳಿತದ ನಿಯಂತ್ರಣವನ್ನು ಹೊಂದಿರುವ ಕೇಂದ್ರ ಸರ್ಕಾರದ ಮಂತ್ರಾಲಯ ಅಥವಾ ಇಲಾಖೆಯ ರಾಜ್ಯ ಮಂತ್ರಿ ಅಥವಾ ಉಪ ಮಂತ್ರಿ ಯಾರಾದರೂ ಇದ್ದರೆ ಅವನು ಮತ್ತು ಅವನು ಸಂಸ್ಥೆಯ ಪದನಿಮಿತ್ತ ಉಪಾಧ್ಯಕ್ಷನಾಗಿರತಕ್ಕದ್ದು ಮತ್ತು ಅಂಥ ರಾಜ್ಯ ಮಂತ್ರಿ ಅಥವಾ ಉಪ ಮಂತ್ರಿ ಇರದಿದ್ದಲ್ಲಿ, ಸಂಸ್ಥೆಯ ಉಪಾಧ್ಯಕ್ಷನಾಗಿರಲು ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬಹುದಾದಂಥ ವ್ಯಕ್ತಿ;

(ಸಿ) ಸಂಸ್ಥೆಯ ಆಡಳಿತ ನಿಯಂತ್ರಣವನ್ನು ಹೊಂದಿರುವ, ಕೇಂದ್ರ ಸರ್ಕಾರದ ಮಂತ್ರಾಲಯ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ, ಪದನಿಮಿತ್ತ;

(ಡಿ) ಸಂಸ್ಥೆಯ ಮಹಾ ನಿರ್ದೇಶಕ, ಪದನಿಮಿತ್ತ;

(ಇ) ಕೇಂದ್ರ ಸರ್ಕಾರವು ನೇಮಕ ಮಾಡತಕ್ಕ ಸರ್ಕಾರ, ಕೈಗಾರಿಕೆ, ವೈಜ್ಞಾನಿಕ ಮತ್ತು ಸಂಶೋಧನಾ ಸ್ಥಾನಗಳು ಮತ್ತು ಇತರ ಹಿತಾಸಕ್ತಿಗಳನ್ನು ಪ್ರತಿನಿಧಿಸಲು, ನಿಯಮಿಸಬಹುದಾದಷ್ಟು ಸಂಖ್ಯೆಯ ಇತರ ವ್ಯಕ್ತಿಗಳು.

(4) (3)ನೇ ಉಪಪ್ರಕರಣದ (ಇ) ಖಂಡದಲ್ಲಿ ಉಲ್ಲೇಖಿಸಲಾದ ಸದಸ್ಯರ ಪದಾವಧಿ ಮತ್ತು ಅವರಲ್ಲಿ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ವಿಧಾನ ಮತ್ತು ಸದಸ್ಯರು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ಇವು ನಿಯಮಿಸಬಹುದಾದಂತೆ ಇರತಕ್ಕದ್ದು.

(5) ಸಂಸ್ಥೆಯು ತಾನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅನುಸರಿಸುವಲ್ಲಿ ಯಾರ ಸಹಾಯ ಅಥವಾ ಸಲಹೆಯನ್ನು ಇಚ್ಛಿಸುವುದೋ ಆ ಯಾರೇ ವ್ಯಕ್ತಿಗಳನ್ನು ಜೊತೆಗೆ ಸೇರಿಸಿಕೊಳ್ಳಬಹುದು ಮತ್ತು ಹಾಗೆ ಜೊತೆಗೆ ಸೇರಿಸಿಕೊಂಡ ವ್ಯಕ್ತಿಯು ಅವನನ್ನು ಯಾವ ಉದ್ದೇಶಕ್ಕಾಗಿ ಜೊತೆಗೆ ಸೇರಿಸಿಕೊಳ್ಳಲಾಗಿದೆಯೋ ಆ ಉದ್ದೇಶಕ್ಕೆ ಸುಸಂಗತವಾದ ಸಂಸ್ಥೆಯ ಚರ್ಚೆಗಳಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರತಕ್ಕದ್ದು, ಆದರೆ ಮತ ಚಲಾಯಿಸುವ ಹಕ್ಕನ್ನು ಹೊಂದತಕ್ಕದ್ದಲ್ಲ.

**4. ಕಾರ್ಯಕಾರಿ ಸಮಿತಿಯ ರಚನೆ:–** (1) ಸಂಸ್ಥೆಯು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಕೆಳಕಂಡ ಸದಸ್ಯರನ್ನೊಳಗೊಂಡ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಬಹುದು, ಎಂದರೆ:–

(ಎ) ಸಂಸ್ಥೆಯ ಮಹಾ ನಿರ್ದೇಶಕ, ಅವನು ಅದರ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು:

(ಬಿ) ನಿಯಮಿಸಬಹುದಾದಷ್ಟು ಸಂಖ್ಯೆಯ ಸದಸ್ಯರು.

(2) (1)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ಕಾರ್ಯಕಾರಿ ಸಮಿತಿಯು, ಸಂಸ್ಥೆಯು ಅದಕ್ಕೆ ಪ್ರತ್ಯಾಯೋಜಿಸಬಹುದಾದಂಥ ಸಂಸ್ಥೆಯ ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು, ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.

**5. ಸಲಹಾ ಸಮಿತಿಗಳು ಮತ್ತು ಇತರ ಸಮಿತಿಗಳ ರಚನೆ.–** (1) ಈ ಸಂಬಂಧದಲ್ಲಿ ರಚಿಸಲಾದ ಯಾವುದೇ ವಿನಿಯಮಗಳಿಗೆ ಒಳಪಟ್ಟು, ಸಂಸ್ಥೆಯು ಕಾಲಕಾಲಕ್ಕೆ ಮತ್ತು ಅಗತ್ಯವೆಂದು ಪರಿಗಣಿಸಿದಾಗಲೆಲ್ಲಾ, ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಈ ಕೆಳಕಂಡ ಸಲಹಾ ಸಮಿತಿಗಳನ್ನು ರಚಿಸಬಹುದು, ಎಂದರೆ:–

(ಎ) ಹಣಕಾಸು ಸಮಿತಿ;

(ಬಿ) ಪ್ರಮಾಣೀಕರಣ ಸಲಹಾ ಸಮಿತಿ;

(ಸಿ) ಮಾನಕಗಳ ಸಲಹಾ ಸಮಿತಿ;

(ಡಿ) ಪ್ರಯೋಗ ಶಾಲಾ ಸಲಹಾ ಸಮಿತಿ;

(ಇ) ಯೋಜನೆ ಮತ್ತು ಅಭಿವೃದ್ಧಿ ಸಲಹಾ ಸಮಿತಿಗಳು.

(ಎಫ್) ವಿನಿಯಮಗಳ ಮೂಲಕ ನಿರ್ಧರಿಸಬಹುದಾದಷ್ಟು ಸಂಖ್ಯೆಯ ಇತರ ಸಮಿತಿಗಳು;

(2) ಪ್ರತಿಯೊಂದು ಸಲಹಾ ಸಮಿತಿಯು ಒಬ್ಬ ಅಧ್ಯಕ್ಷ ಮತ್ತು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಒಳಗೊಂಡ ಅಧಿಕಾರಗಳಿಗೆ ಬಾಧಕವಿಲ್ಲದಂತೆ, ಸಂಸ್ಥೆಯು ಅಗತ್ಯವೆಂದು ಪರಿಗಣಿಸಿದಾಗಲೆಲ್ಲಾ, ವಸ್ತುಗಳ ಅಥವಾ ಸಂಸ್ಕರಣೆಗಳ ಸಂಬಂಧವಾಗಿ ಮಾನಕಗಳ ಸೂತ್ರೀಕರಣಕ್ಕಾಗಿ ತಜ್ಞರ ಅಂಥ ಸಂಖ್ಯೆಯ ತಾಂತ್ರಿಕ ಸಮಿತಿಗಳನ್ನು ರಚಿಸಬಹುದು.

**6. ಖಾಲಿ ಸ್ಥಾನಗಳು ಮುಂತಾದವುಗಳು ಸಂಸ್ಥೆ, ಕಾರ್ಯಕಾರಿ ಸಮಿತಿ ಮುಂತಾದವುಗಳ ವ್ಯವಹರಣೆಗಳನ್ನು ಅವಿಧಿಮಾನ್ಯಗೊಳಿಸದಿರುವುದು.–** ಸಂಸ್ಥೆಯ, ಕಾರ್ಯಕಾರಿ ಸಮಿತಿಯ ಅಥವಾ 5ನೇ ಪ್ರಕರಣದ ಮೇರೆಗೆ ರಚಿತವಾದ ಯಾವುದೇ ಸಮಿತಿಯ ಯಾವುದೇ ಕೃತ್ಯ ಅಥವಾ ವ್ಯವಹರಣೆಯು,–

(ಎ) ಸಂಸ್ಥೆ ಅಥವಾ ಸಮಿತಿಯಲ್ಲಿರುವ ಯಾವುದೇ ಖಾಲಿ ಸ್ಥಾನ ಅಥವಾ ಅವುಗಳ ರಚನೆಯಲ್ಲಿನ ಯಾವುದೇ ದೋಷ: ಅಥವಾ

(ಬಿ) ಸಂಸ್ಥೆ ಅಥವಾ ಸಮಿತಿಯ ಸದಸ್ಯನಾಗಿ ಕೆಲಸ ಮಾಡುತ್ತಿರುವ ವ್ಯಕ್ತಿಯ ನೇಮಕಾತಿಯಲ್ಲಿನ ಯಾವುದೇ ದೋಷ: ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂತೆ, ಸಂಸ್ಥೆಯ ಅಥವಾ ಸಮಿತಿಯ ಪ್ರಕ್ರಿಯೆಯಲ್ಲಿನ ಯಾವುದೇ ಅನಿಯತತೆ

– ಇವುಗಳ ಕಾರಣ ಮಾತ್ರದಿಂದ ಅವಿಧಿಮಾನ್ಯವಾಗತಕ್ಕದ್ದಲ್ಲ.

**7. ಸಂಸ್ಥೆಯ ಮಹಾ ನಿರ್ದೇಶಕ.–** (1) ಕೇಂದ್ರ ಸರ್ಕಾರವು, ಸಂಸ್ಥೆಗೆ ಒಬ್ಬ ಮಹಾ ನಿರ್ದೇಶಕನನ್ನು ನೇಮಕ ಮಾಡತಕ್ಕದ್ದು.

(2) ಸಂಸ್ಥೆಯ ಮಹಾನಿರ್ದೇಶಕನ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಸಂಸ್ಥೆಯ ಸಾಮಾನ್ಯ ಅಧಿವೀಕ್ಷಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಸಂಸ್ಥೆಯ ಮಹಾನಿರ್ದೇಶಕನು ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಪ್ರಾಧಿಕಾರಿಯಾಗಿರತಕ್ಕದ್ದು.

(4) ಸಂಸ್ಥೆಯ ಮಹಾನಿರ್ದೇಶಕನು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ಸಂಸ್ಥೆಯ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

**8. ಸಂಸ್ಥೆಯ ಅಧಿಕಾರಿಗಳು ಮತ್ತು ನೌಕರರು.–** (1) ಸಂಸ್ಥೆಯು ಈ ಅಧಿನಿಯಮದ ಮೇರೆಗಿನ ಅದರ ಪ್ರಕಾರ್ಯಗಳ ದಕ್ಷ ನಿರ್ವಹಣೆಗೆ ಅಗತ್ಯವೆಂದು ಪರಿಗಣಿಸುವಂಥ ಇತರ ಅಧಿಕಾರಿಗಳು ಮತ್ತು ನೌಕರರನ್ನು ನೇಮಕ ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನೇಮಕ ಮಾಡಲಾದ ಸಂಸ್ಥೆಯ ಅಧಿಕಾರಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ – III

## ಸಂಸ್ಥೆಗೆ ಭಾರತೀಯ ಮಾನಕಗಳ ಸಂಸ್ಥೆಯ ಆಸ್ತಿಗಳು, ಹೊಣೆಗಳು ಮುಂತಾದವುಗಳ ವರ್ಗಾವಣೆ

**9. ಭಾರತೀಯ ಮಾನಕಗಳ ಸಂಸ್ಥೆಯ ಆಸ್ತಿಗಳು, ಹೊಣೆಗಳು ಮತ್ತು ನೌಕರರ ವರ್ಗಾವಣೆ.–** (1) ಸಂಸ್ಥೆಯ ಸ್ಥಾಪನೆಯ ಸಿನಾಂಕದಂದು ಮತ್ತು ಅಂದಿನಿಂದ,–

(ಎ) ಈ ಅಧಿನಿಯಮವನ್ನು ಹೊರತುಪಡಿಸಿ, ಇತರ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಕರಾರು ಅಥವಾ ಇತರ ಲಿಖಿತದಲ್ಲಿ ಭಾರತೀಯ ಮಾನಕಗಳ ಸಂಸ್ಥೆಗೆ ಮಾಡಿದ ಯಾವುದೇ ಉಲ್ಲೇಖವನ್ನು ಸಂಸ್ಥೆಗೆ ಮಾಡಿದ ಉಲ್ಲೇಖವೆಂದು ಭಾವಿಸತಕ್ಕದ್ದು;

(ಬಿ) ಭಾರತೀಯ ಮಾನಕಗಳ ಸಂಸ್ಥೆಯ ಅಥವಾ ಅದಕ್ಕೆ ಸಂಬಂಧಪಟ್ಟ ಎಲ್ಲಾ ಚರ ಮತ್ತು ಸ್ಥಿರ ಸ್ವತ್ತುಗಳು ಮತ್ತು ಆಸ್ತಿಗಳು, ಸಂಸ್ಥೆಯಲ್ಲಿ ನಿಹಿತವಾಗತಕ್ಕದ್ದು;

(ಸಿ) ಭಾರತೀಯ ಮಾನಕಗಳ ಸಂಸ್ಥೆಯ ಎಲ್ಲಾ ಹಕ್ಕುಗಳು ಮತ್ತು ಹೊಣಗಾರಿಕೆಗಳು ಸಂಸ್ಥೆಗೆ ವರ್ಗಾವಣೆಯಾಗತಕ್ಕದ್ದು ಮತ್ತು ಅವು ಆ ಸಂಸ್ಥೆಯ ಹಕ್ಕುಗಳು ಮತ್ತು ಹೊಣೆಗಾರಿಕೆಗಳಾಗತಕ್ಕದ್ದು;

(ಡಿ) (ಸಿ) ಖಂಡದ ಉಪಬಂಧಗಳಿಗೆ ಬಾಧಕವಾಗದಂತೆ ಭಾರತೀಯ ಮಾನಕಗಳ ಸಂಸ್ಥೆಯ ಉದ್ದೇಶಗಳಿಗಾಗಿ ಅಥವಾ ಆ ಸಂಬಂಧವಾಗಿ ಆ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಸದರಿ ಸಂಸ್ಥೆಯಿಂದ, ಅದರೊಂದಿಗೆ ಅಥವಾ ಅದರ ಪರವಾಗಿ ವಹಿಸಲಾದ ಎಲ್ಲಾ ಸಾಲಗಳು, ಬಾಧ್ಯತೆಗಳು ಮತ್ತು ಹೊಣೆಗಳು, ಮಾಡಿಕೊಂಡ ಎಲ್ಲಾ ಕರಾರುಗಳು ಮತ್ತು ಮಾಡಲು ಗೊತ್ತುಪಡಿಸಿದ ಎಲ್ಲ ವಿಷಯಗಳು ಮತ್ತು ಕಾರ್ಯಗಳನ್ನು ಸಂಸ್ಥೆಯಿಂದ ಅಥವಾ ಅದರೊಂದಿಗೆ ಅಥವಾ ಅದರ ಪರವಾಗಿ ವಹಿಸಲಾಗಿದೆ, ಮಾಡಿಕೊಳ್ಳಲಾಗಿದೆ ಅಥವಾ ಮಾಡಲು ಗೊತ್ತುಪಡಿಸಲಾಗಿದೆ ಎಂದು ಭಾವಿಸತಕ್ಕದ್ದು;

(ಇ) ಆ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಭಾರತೀಯ ಮಾನಕಗಳ ಸಂಸ್ಥೆಗೆ ಬರಬೇಕಾದ ಹಣದ ಎಲ್ಲಾ ಮೊತ್ತಗಳನ್ನು ಸಂಸ್ಥೆಗೆ ಬರತಕ್ಕವುಗಳೆಂದು ಭಾವಿಸತಕ್ಕದ್ದು;

(ಎಫ್) ಭಾರತೀಯ ಮಾನಕಗಳ ಸಂಸ್ಥೆಯಿಂದ ಅಥವಾ ಅದರ ವಿರುದ್ಧವಾಗಿ ಆ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಹೂಡಿದ್ದ ಅಥವಾ ಹೂಡಬಹುದಾಗಿದ್ದ ಎಲ್ಲ ದಾವೆಗಳು ಮತ್ತು ಇತರ ವ್ಯವಹರಣೆಗಳನ್ನು ಸಂಸ್ಥೆಯಿಂದ ಅಥವಾ ಅದರ ವಿರುದ್ದವಾಗಿ ಮುಂದುವರಿಸಬಹುದು ಅಥವಾ ಹೂಡಬಹುದು; ಮತ್ತು

(ಜಿ) ಆ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಭಾರತೀಯ ಮಾನಕಗಳ ಸಂಸ್ಥೆಯ ಅಡಿಯಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಿರುವ ಪ್ರತಿಯೊಬ್ಬ ನೌಕರನು, ಆ ಸಂಸ್ಥೆಯನ್ನು ಸ್ಥಾಪಿಸಿರದಿದ್ದರೆ ಆ ಹುದ್ದೆಯನ್ನು ಯಾವ ಸೇವಾವಧಿ ಮತ್ತು ಸಂಭಾವನೆ, ರಜೆ, ಭವಿಷ್ಯನಿಧಿ, ನಿವೃತ್ತಿ ಅಥವಾ ಇತರ ಸೇವಾಂತ ಪ್ರಯೋಜನಗಳಿಗೆ ಸಂಬಂಧಿಸಿದ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಧಾರಣಮಾಡಿರುತ್ತಿದ್ದನೋ ಅದೇ ಸೇವಾವಧಿ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಸಂಸ್ಥೆಯಲ್ಲಿ ತನ್ನ ಹುದ್ದೆಯನ್ನು ಧಾರಣ ಮಾಡತಕ್ಕದ್ದು ಮತ್ತು ಆ ಸಂಸ್ಥೆಯ ನೌಕರನಾಗಿ ಹಾಗೆ ಮುಂದುವರಿಯತಕ್ಕದ್ದು ಅಥವಾ ಅಂಥ ನೌಕರನು ಆರು ತಿಂಗಳ ಅವಧಿಯೊಳಗಾಗಿ ಸಂಸ್ಥೆಯ ನೌಕರನಾಗಿರಲು ಅಯ್ಕೆ ಮಾಡಿಕೊಳ್ಳದಿದ್ದರೆ ಆ ದಿನಾಂಕದಿಂದ ಅಂಥ ಅವಧಿಯು ಮುಗಿಯುವವರೆಗೆ ಮುಂದುವರಿಯತಕ್ಕದ್ದು.

(2) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14) ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಈ ಪ್ರಕರಣದ ಮೇರೆಗೆ ಸಂಸ್ಥೆಯು ತನ್ನ ನಿಯತ ಸೇವೆಯಲ್ಲಿ ಮಾಡಿದ ಯಾವನೇ ನೌಕರನ ವಿಲಯನದಿಂದ ಆ ಅಧಿನಿಯಮದ ಅಥವಾ ಇತರ ಕಾನೂನಿನ ಮೇರೆಗೆ ಅವನು ಯಾವುದೇ ಪರಿಹಾರಕ್ಕೆ ಹಕ್ಕುಳ್ಳವನಾಗತಕ್ಕದ್ದಲ್ಲ, ಮತ್ತು ಅಂಥ ಯಾವುದೇ ಕ್ಲೇಮನ್ನು ಯಾವುದೇ ನ್ಯಾಯಾಲಯ, ನ್ಯಾಯಮಂಡಳಿ ಅಥವಾ ಇತರ ಪ್ರಾಧಿಕಾರವು ಪುರಸ್ಕರಿಸತಕ್ಕದ್ದಲ್ಲ.

## ಅಧ್ಯಾಯ – IV
## ಸಂಸ್ಥೆಯ ಅಧಿಕಾರಗಳು ಮತ್ತು ಪ್ರಕಾರ್ಯಗಳು

**10. ಸಂಸ್ಥೆಯ ಪ್ರಕಾರ್ಯಗಳು:–** (1) ಸಂಸ್ಥೆಯು ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಅದಕ್ಕೆ ವಹಿಸಿಕೊಡಬಹುದಾದಂಥ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಕರ್ತವ್ಯಗಳನ್ನು ನಿರ್ವಹಿಸಬಹುದು ಮತ್ತು ವಿಶೇಷತಃ ಅಂಥ ಅಧಿಕಾರಗಳಲ್ಲಿ ಕೆಳಕಂಡ ಅಧಿಕಾರಗಳು ಸೇರಿರುತ್ತವೆ:–

(ಎ) ಯಾವುದೇ ವಸ್ತು ಅಥವಾ ಸಂಸ್ಕರಣಕ್ಕೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ರೀತಿಯಲ್ಲಿ ಭಾರತೀಯ ಮಾನಕವನ್ನು ಸ್ಥಾಪಿಸುವುದು, ಪ್ರಕಟಿಸುವುದು ಮತ್ತು ಉತ್ತೇಜಿಸುವುದು;

(ಬಿ) ಯಾವುದೇ ವಸ್ತು ಅಥವಾ ಸಂಸ್ಕರಣಕ್ಕೆ ಸಂಬಂಧಿಸಿದಂತೆ, ಭಾರತದ ಅಥವಾ ಇತರೆಡೆಯ ಇತರ ಯಾವುದೇ ಸಂಸ್ಥೆಯು ಸ್ಥಾಪಿಸಿದ ಯಾವುದೇ ಮಾನಕವನ್ನು ನಿಯಮಿಸಬಹುದಾದ ರೀತಿಯಲ್ಲಿ ಒಂದು ಭಾರತೀಯ ಮಾನಕವೆಂದು ಮನ್ನಣೆ ನೀಡುವುದು;

(ಸಿ) ಒಂದು ನಿರ್ದಿಷ್ಟ ಭಾರತೀಯ ಮಾನಕವನ್ನು ನಿರೂಪಿಸಲು ನಿಯಮಿಸಬಹುದಾದಂಥ ವಿನ್ಯಾಸವುಳ್ಳ ಮತ್ತು ವಿವರಗಳನ್ನೊಳಗೊಂಡ, ಭಾರತೀಯ ಮಾನಕಗಳ ಸಂಸ್ಥೆಯ ಪ್ರಮಾಣೀಕರಣ ಗುರುತು ಎಂದು ಕರೆಯಲಾಗುವ ಒಂದು ಮಾನಕ ಗುರುತನ್ನು ನಿರ್ದಿಷ್ಟಪಡಿಸುವುದು;

(ಡಿ) ಮಾನಕ ಗುರುತಿನ ಉಪಯೋಗಕ್ಕಾಗಿ ಒಂದು ಲೈಸೆನ್ಸನ್ನು ನೀಡುವುದು, ನವೀಕರಿಸುವುದು, ಅಮಾನತುಗೊಳಿಸುವುದು ಅಥವಾ ರದ್ದುಪಡಿಸುವುದು;

(ಇ) ಯಾವುದೇ ಲೈಸೆನ್ಸ್ ನೀಡಿಕೆಗಾಗಿ ಅಥವಾ ನವೀಕರಣಕ್ಕಾಗಿ ಶುಲ್ಕ ವಿಧಿಸುವುದು;

(ಎಫ್) ಮಾನಕ ಗುರುತನ್ನು ಯಾವ ವಸ್ತು ಅಥವಾ ಸಂಸ್ಕರಣ ವಿಧಾನದ ಸಂಬಂಧದಲ್ಲಿ ಉಪಯೋಗಿಸಲಾಗಿದೆಯೋ ಆ ಯಾವುದೇ ವಸ್ತು ಅಥವಾ ಸಂಸ್ಕರಣವು ಭಾರತೀಯ ಮಾನಕಕ್ಕೆ ಅನುರೂಪವಾಗಿದೆಯೋ ಅಥವಾ ಲೈಸೆನ್ಸಿನೊಂದಿಗೆ ಅಥವಾ ಲೈಸೆನ್ಸಿಲ್ಲದೆ ಯಾವುದೇ ವಸ್ತು ಅಥವಾ ಸಂಸ್ಕರಣೆಯ ಸಂಬಂಧದಲ್ಲಿ ಮಾನಕ ಗುರುತನ್ನು ಕ್ರಮಬದ್ಧವಾಗಿ ಉಪಯೋಗಿಸಲಾಗಿದೆಯೇ ಎಂದು ನೋಡಲು ಅಗತ್ಯವಾಗಬಹುದಾದಂಥ ಪರಿಶೀಲನೆ ನಡೆಸುವುದು ಮತ್ತು ಯಾವುದೇ ಸಾಮಗ್ರಿ ಅಥವಾ ಪದಾರ್ಥದ ಮಾದರಿಗಳನ್ನು ತೆಗೆದುಕೊಳ್ಳುವುದು;

(ಜಿ) ಯಾವುದೇ ದೇಶದಲ್ಲಿನ ಯಾವುದೇ ಸಂವಾದಿ ಸಂಸ್ಥೆ ಅಥವಾ ಸಂಘಟನೆಯೊಂದಿಗೆ ಸಂಸ್ಥೆಯು ಪರಸ್ಪರ ಒಪ್ಪಂದ ಮಾಡಿಕೊಂಡಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಭಾರತದ ಹೊರಗಡೆ ಸಂಸ್ಥೆಗೆ ಮತ್ತು ಭಾರತೀಯ ಮಾನಕಗಳಿಗೆ ಮನ್ನಣೆ ಕೋರುವುದು;

(ಹೆಚ್) ಮಾನಕೀಕರಣ ಮತ್ತು ಗುಣ ನಿಯಂತ್ರಣದ ಉದ್ದೇಶಗಳಿಗಾಗಿ ಮತ್ತು ನಿಯಮಿಸಬಹುದಾದಂಥ ಇತರ ಉದ್ದೇಶಗಳಿಗಾಗಿ ಪ್ರಯೋಗ ಶಾಲೆಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಅವುಗಳಿಗೆ ಮನ್ನಣೆ ಕೊಡುವುದು;

(ಐ) ಬಳಕೆದಾರ ಮತ್ತು ತಯಾರಕರ ಹಿತದೃಷ್ಟಿಯಿಂದ ಭಾರತೀಯ ಮಾನಕಗಳ ಸೂತ್ರೀಕರಣಕ್ಕಾಗಿ ಸಂಶೋಧನೆ ಕೈಗೊಳ್ಳುವುದು;

(ಜೆ) ಯಾವುದೇ ವಸ್ತು ಅಥವಾ ಸಂಸ್ಕರಣದ ಮಾನಕೀಕರಣದಲ್ಲಿ ಅಥವಾ ಯಾವುದೇ ವಸ್ತು ಅಥವಾ ಸಂಸ್ಕರಣದ ಗುಣಮಟ್ಟದ ಸುಧಾರಣೆಯಲ್ಲಿ ತೊಡಗಿರುವ ಭಾರತದ ಅಥವಾ ಹೊರಗಡೆಯ ಯಾವುದೇ ಸಂಸ್ಥೆಗೆ ಮನ್ನಣೆ ನೀಡುವುದು;

(ಕೆ) ವಸ್ತುಗಳು ಅಥವಾ ಸಂಸ್ಕರಣಗಳ ತಯಾರಕರು ಮತ್ತು ಬಳಕೆದಾರರಿಗೆ ಪರಸ್ಪರ ಒಪ್ಪಂದ ಮಾಡಿಕೊಳ್ಳಬಹುದಾದ ನಿಬಂಧನೆಗಳು ಮತ್ತು ಷರತ್ತುಗಳು ಮೇಲೆ ಸೇವೆಗಳನ್ನು ಒದಗಿಸುವುದು;

(ಎಲ್) ಪರಿಶೀಲನೆ, ಪರೀಕ್ಷೆ ಮತ್ತು ನಿಯಮಿಸಬಹುದಾದಂಥ ಇತರ ಉದ್ದೇಶಗಳಿಗಾಗಿ ಭಾರತದಲ್ಲಿ ಅಥವಾ ಭಾರತದ ಹೊರಗಡೆ ಏಜೆಂಟರನ್ನು ನೇಮಿಸುವುದು;

(ಎಂ) ಭಾರತದಲ್ಲಿ ಅಥವಾ ಹೊರಗಡೆ ಶಾಖೆಗಳು, ಕಚೇರಿಗಳು ಅಥವಾ ಏಜೆನ್ಸಿಗಳನ್ನು ಸ್ಥಾಪಿಸುವುದು;

(ಎನ್) ಯಾವ ವಸ್ತು ಅಥವಾ ಸಂಸ್ಕರಣದ ಸಂಬಂಧದಲ್ಲಿ ಮಾನಕ ಗುರುತನ್ನು ಉಪಯೋಗಿಸಲಾಗಿದೆಯೋ ಅಥವಾ ಈ ಅಧಿನಿಯಮದಿಂದ ಅಥವಾ ಯಾವುದೇ ಕಾನೂನಿನ ಮೇರೆಗೆ ಭಾರತೀಯ ಮಾನಕಕ್ಕೆ ಅನುರೂಪವಾಗಿರಬೇಕಾಗಿದೆಯೋ ಅಂಥ ವಸ್ತು ಅಥವಾ ಸಂಸ್ಕರಣವು ಭಾರತದಲ್ಲಿರಲಿ ಅಥವಾ ಭಾರತದ ಹೊರಗಡೆಯ ಒಂದು ಸ್ಥಳದಿಂದ ಭಾರತಕ್ಕೆ ತರಲ್ಪಟ್ಟಿರಲಿ ಅಥವಾ ಅದನ್ನು ತರಲು ಉದ್ದೇಶಿಸಿರಲಿ, ಅದನ್ನು

– ನಿಯಮಿಸಬಹುದಾದಂಥ ವೇಳೆಗಳಲ್ಲಿ ಮತ್ತು ಸ್ಥಳಗಳಲ್ಲಿ ಪರಿಶೀಲಿಸುವುದು;

(ಓ) ಮಾನಕೀಕರಣದಲ್ಲಿ ಮತ್ತು ಯಾವುದೇ ವಸ್ತು ಅಥವಾ ಸಂಸ್ಕರಣದ ಗುಣಮಟ್ಟ ಸುಧಾರಣೆಯಲ್ಲಿ ಅಥವಾ ಯಾವುದೇ ಗುಣನಿಯಂತ್ರಣ ಚಟುವಟಿಕೆಗಳಲ್ಲಿ ತೊಡಗಿರುವ ಯಾರೇ ತಯಾರಕನ ಅಥವಾ ತಯಾರಕರ ಅಥವಾ ಬಳಕೆದಾರರ ಸಂಘದ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದು;

(ಪಿ) ನಿಯಮಿಸಬಹುದಾದಂಥ ಇತರೆ ಪ್ರಕಾರ್ಯಗಳನ್ನು ನಿರ್ವಹಿಸುವುದು.

(2) ಸಂಸ್ಥೆಯು, ಕೇಂದ್ರ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗೆ ಅನುಸಾರವಾಗಿ ಮತ್ತು ಅವುಗಳಿಗೆ ಒಳಪಟ್ಟು ಈ ಪ್ರಕರಣದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**11. ಮಾನಕ ಗುರುತಿನ ಅನುಚಿತ ಬಳಕೆಯ ನಿಷೇಧ:–** (1) ಯಾರೇ ವ್ಯಕ್ತಿಯು ಲೈಸೆನ್ಸಿನ ಮೇರೆಗೆ ಹೊರತು, ಯಾವುದೇ ವಸ್ತು ಅಥವಾ ಸಂಸ್ಕರಣಕ್ಕೆ ಸಂಬಂಧಿಸಿದಂತೆ ಅಥವಾ ಯಾವುದೇ ಪೇಟೆಂಟಿನ

ಶಿರೋನಾಮೆಯಲ್ಲಿ ಅಥವಾ ಯಾವುದೇ ವ್ಯಾಪಾರದ ಗುರುತು ಅಥವಾ ವಿನ್ಯಾಸದಲ್ಲಿ ಮಾನಕ ಗುರುತನ್ನು ಅಥವಾ ಅದರ ಯಾವುದೇ ಕೃತಕ ಅನುಕರಣೆಯನ್ನು ಉಪಯೋಗಿಸತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು, ಅವನಿಗೆ ಲೈಸೆನ್ಸನ್ನು ನೀಡಿದ್ದರೂ ಯಾವುದೇ ವಸ್ತು ಅಥವಾ ಸಂಸ್ಕರಣದ ಸಂಬಂಧದಲ್ಲಿ ಅಂಥ ವಸ್ತು ಅಥವಾ ಸಂಸ್ಕರಣವು ಭಾರತೀಯ ಮಾನಕಕ್ಕೆ ಅನುರೂಪವಾಗಿದ್ದ ಹೊರತು, ಮಾನಕ ಗುರುತನ್ನು ಅಥವಾ ಅದರ ಯಾವುದೇ ಕೃತಕ ಅನುಕರಣೆಯನ್ನು ಉಪಯೋಗಿಸತಕ್ಕದ್ದಲ್ಲ.

**12. ಕೆಲವು ಹೆಸರುಗಳು, ಮುಂತಾದವುಗಳ ಬಳಕೆಯ ನಿಷೇಧ.**– ಯಾರೇ ವ್ಯಕ್ತಿಯು, ನಿಯಮಿಸಬಹುದಾದಂಥ ಪ್ರಕರಣಗಳಲ್ಲಿ ಮತ್ತು ಷರತ್ತುಗಳ ಮೇರೆಗೆ ಹೊರತು, ಸಂಸ್ಥೆಯ ಪೂರ್ವಾನುಮತಿಯಿಲ್ಲದೆ,–

(ಎ) ಸಾರ್ವಜನಿಕರನ್ನು ಮೋಸಗೊಳಿಸುವಂತೆ ಅಥವಾ ಮೋಸಗೊಳಿಸುವ ಸಂಭವವಿರುವಂತೆ, ಸಂಸ್ಥೆಯ ಹೆಸರನ್ನು ಬಹುಮಟ್ಟಿಗೆ ಹೋಲುವ ಅಥವಾ 'ಭಾರತೀಯ ಮಾನಕ' ಎಂಬ ಪದಾವಳಿಯನ್ನು ಅಥವಾ ಅದರ ಯಾವುದೇ ಸಂಕ್ಷೇಪವನ್ನು ಒಳಗೊಂಡ ಯಾವುದೇ ಹೆಸರನ್ನು; ಅಥವಾ

(ಬಿ) "ಭಾರತೀಯ ಮಾನಕ" ಅಥವಾ "ಭಾರತೀಯ ಮಾನಕ ನಿರ್ದಿಷ್ಟ ವಿವರಣೆ" ಅಥವಾ ಅಂಥ ಪದಾವಳಿಗಳ ಯಾವುದೇ ಸಂಕ್ಷೇಪಗ:ನ್ನು ಒಳಗೊಂಡ, ಯಾವುದೇ ವಸ್ತು ಅಥವಾ ಸಂಸ್ಕರಣದ ಸಂಬಂಧದಲ್ಲಿ ಯಾವುದೇ ಗುರುತು ಅಥವಾ ವ್ಯಾಪಾರದ ಗುರುತನ್ನು

– ಉಪಯೋಗಿಸತಕ್ಕದ್ದಲ್ಲ.

**13. ಕೆಲವು ಸಂದರ್ಭಗಳಲ್ಲಿ ನೋಂದಣಿ ನಿಷೇಧ.**– (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಯಾರೇ ನೋಂದಣಿ ಪ್ರಾಧಿಕಾರಿಯು, ಯಾವೊಂದು ಹೆಸರು ಅಥವಾ ಗುರುತಿನ ಉಪಯೋಗವು 11ನೇ ಪ್ರಕರಣ ಅಥವಾ 12ನೇ ಪ್ರಕರಣದ ಉಲ್ಲಂಘನೆಯಾಗುವಂತಿದ್ದರೆ,–

(ಎ) ಅಂಥ ಯಾವುದೇ ಹೆಸರು ಅಥವಾ ಗುರುತನ್ನು ಹೊಂದಿರುವ ಯಾವುದೇ ಕಂಪನಿ, ಫರ್ಮು ಅಥವಾ ವ್ಯಕ್ತಿಗಳ ಇತರ ನಿಕಾಯಗಳನ್ನು; ಅಥವಾ

(ಬಿ) ಅಂಥ ಯಾವುದೇ ಹೆಸರು ಅಥವಾ ಗುರುತನ್ನು ಹೊಂದಿರುವ ಒಂದು ವ್ಯಾಪಾರದ ಗುರುತು ಅಥವಾ ವಿನ್ಯಾಸವನ್ನು;

(ಸಿ) ಅಂಥ ಯಾವುದೇ ಹೆಸರು ಅಥವಾ ಗುರುತನ್ನು ಹೊಂದಿರುವ ಸಂಶೋಧನೆಯ ಸಂಬಂಧದಲ್ಲಿ

–ಪೇಟೆಂಟನ್ನು ನೀಡತಕ್ಕದ್ದಲ್ಲ.

(2) ಯಾವುದೇ ಹೆಸರು ಅಥವಾ ಗುರುತನ್ನು 11ನೇ ಪ್ರಕರಣವನ್ನು ಅಥವಾ 12ನೇ ಪ್ರಕರಣವನ್ನು ಉಲ್ಲಂಘಿಸಿ ಉಪಯೋಗಿಸಲಾಗಿದೆಯೇ ಎಂಬ ಬಗ್ಗೆ ನೋಂದಣಿ ಪ್ರಾಧಿಕಾರಿಯ ಎದುರು ಯಾವುದೇ ಪ್ರಶ್ನೆ ಉದ್ಭವಿಸಿದರೆ, ನೋಂದಣಿ ಪ್ರಾಧಿಕಾರಿಯು ಆ ಪ್ರಶ್ನೆಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಬಹುದು ಮತ್ತು ಅದರ ಮೇಲಿನ ಅದರ ತೀರ್ಮಾನವು ಅಂತಿಮವಾಗತಕ್ಕದ್ದು.

**14. ಕೆಲವು ಅನುಸೂಚಿತ ಕೈಗಾರಿಕೆಗಳು, ವಸ್ತುಗಳು ಮತ್ತು ಸಂಸ್ಕರಣಗಳಿಗೆ ಕಡ್ಡಾಯವಾಗಿ ಮಾನಕ ಗುರುತುಗಳನ್ನು ಬಳಸುವುದು.**– ಕೇಂದ್ರ ಸರ್ಕಾರವು, ಸಂಸ್ಥೆಯೊಂದಿಗೆ ಸಮಾಲೋಚಿಸಿದ ನಂತರ, ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅಗತ್ಯ ಅಥವಾ ಯುಕ್ತವೆಂದು ಅಭಿಪ್ರಾಯಪಟ್ಟರೆ, ರಾಜಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ,–

(ಎ) ಭಾರತೀಯ ಮಾನಕಕ್ಕೆ ಅನುರೂಪವಾಗಿರತಕ್ಕ ಯಾವುದೇ ಅನುಸೂಚಿತ ಕೈಗಾರಿಕೆಯ ಯಾವುದೇ ವಸ್ತು ಅಥವಾ ಸಂಸ್ಕರಣವನ್ನು ಅಧಿಸೂಚಿಸಬಹುದು; ಮತ್ತು

(ಬಿ) ಅಂಥ ವಸ್ತು ಅಥವಾ ಸಂಸ್ಕರಣದ ಮೇಲೆ, ಕಡ್ಡಾಯವಾಗಿ ಲೈಸೆನ್ಸ್ ಪಡೆದು ಮಾನಕ ಗುರುತನ್ನು ಬಳಸಬೇಕೆಂದು ನಿರ್ದೇಶಿಸಬಹುದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ, 'ಅನುಸೂಚಿತ ಕೈಗಾರಿಕೆ' ಎಂಬ ಪದಾವಳಿಯು ಕೈಗಾರಿಕೆಗಳ (ಅಭಿವೃದ್ಧಿ ಮತ್ತು ವಿನಿಯಮನ) ಅಧಿನಿಯಮ, 1951 (1951ರ 65) ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರತಕ್ಕದ್ದು.

## ಅಧ್ಯಾಯ – V
## ಲೈಸೆನ್ಸು

**15. ಲೈಸೆನ್ಸ್ ನೀಡಿಕೆ.**– (1) ಸಂಸ್ಥೆಯು ವಿನಿಯಮಗಳಿಂದ ನಿರ್ಧರಿಸಬಹುದಾದಂಥ ರೀತಿಯಲ್ಲಿ ಆದೇಶದ ಮೂಲಕ ಒಂದು ಲೈಸೆನ್ಸನ್ನು ಮಂಜೂರು, ನವೀಕರಣೆ, ಅಮಾನತು ಅಥವಾ ರದ್ದು ಮಾಡಬಹುದು.

(2) (1)ನೇ ಉಪ–ಪ್ರಕರಣದ ಮೇರೆಗಿನ ಲೈಸೆನ್ಸು ನೀಡಿಕೆ ಅಥವಾ ನವೀಕರಣವು ವಿನಿಯಮಗಳಿಂದ ನಿರ್ಧರಿಸಬಹುದಾದಂಥ ಷರತ್ತುಗಳಿಗೆ ಮತ್ತು ಅಂಥ ಶುಲ್ಕಗಳ ಸಂದಾಯಕ್ಕೆ ಒಳಪಟ್ಟು ಇರತಕ್ಕದ್ದು.

**16. ಅಪೀಲು.**– (1) 15ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ನಿಯಮಿಸಬಹುದಾದಂಥ ಅವಧಿಯೊಳಗಾಗಿ ಕೇಂದ್ರ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

(2) ಅಪೀಲಿಗಾಗಿ ನಿಯಮಿಸಿದ ಅವಧಿಯು ಮುಗಿದ ನಂತರ ಸಲ್ಲಿಸಿದ ಯಾವುದೇ ಅಪೀಲನ್ನು ಅಂಗೀಕರಿಸತಕ್ಕದ್ದಲ್ಲ:

ಪರಂತು, ಅಪೀಲುದಾರನು ಕೇಂದ್ರ ಸರ್ಕಾರಕ್ಕೆ ನಿಯಮಿತ ಅವಧಿಯೊಳಗಾಗಿ ಅಪೀಲನ್ನು ಸಲ್ಲಿಸದಿರುವಲ್ಲಿ, ಹಾಗೆ ಸಲ್ಲಿಸದಿರಲು ತನಗೆ ಸಾಕಷ್ಟು ಕಾರಣವಿತ್ತೆಂದು ಮನದಟ್ಟು ಮಾಡಿಕೊಟ್ಟರೆ, ಅಪೀಲನ್ನು ಸಲ್ಲಿಸಲು ಗೊತ್ತುಪಡಿಸಿದ್ದ ಅವಧಿ ಮುಗಿದ ನಂತರ ಅಂಗೀಕರಿಸಬಹುದು.

(3) ಈ ಪ್ರಕರಣದ ಮೇರೆಗೆ ಸಲ್ಲಿಸಿದ ಪ್ರತಿಯೊಂದು ಅಪೀಲನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ಯಾವ ಆದೇಶದ ವಿರುದ್ಧವಾಗಿ ಅಪೀಲು ಮಾಡಲಾಗಿದೆಯೋ ಅದರ ಒಂದು ನಕಲನ್ನು ಮತ್ತು ನಿಯಮಿಸಬಹುದಾದಂಥ ಶುಲ್ಕವನ್ನು ಅದಕ್ಕೆ ಲಗತ್ತಿಸತಕ್ಕದ್ದು.

(4) ಅಪೀಲನ್ನು ವಿಲೆ ಮಾಡುವ ಪ್ರಕ್ರಿಯೆಯು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅಪೀಲನ್ನು ವಿಲೇ ಮಾಡುವುದಕ್ಕೆ ಮುಂಚೆ, ಅಪೀಲುದಾರನಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಡತಕ್ಕದ್ದು.

## ಅಧ್ಯಾಯ – VI
## ಹಣಕಾಸು, ಲೆಕ್ಕಪತ್ರಗಳು, ಮತ್ತು ಲೆಕ್ಕ ಪರಿಶೋಧನೆ

**17. ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು.–** ಕೇಂದ್ರ ಸರ್ಕಾರವು, ಈ ಸಂಬಂಶವಾಗಿ ಕಾನೂನಿನ ಮೂಲಕ ಸಂಸತ್ತಿನಿಂದ ಕ್ರಮಬದ್ಧವಾಗಿ ವಿನಿಯೋಗ ಮಾಡಿದ ನಂತರ, ಆ ಸರ್ಕಾರವು ಅವಶ್ಯಕವೆಂದು ಪರಿಗಣಿಸುವಷ್ಟು ಮೊತ್ತಗಳ ಅನುದಾನಗಳು ಮತ್ತು ಸಾಲಗಳನ್ನು ಸಂಸ್ಥೆಗೆ ನೀಡಬಹುದು.

**18. ನಿಧಿ.–** (1) ಭಾರತೀಯ ಮಾನಕಗಳ ಸಂಸ್ಥೆಯ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ರಚಿಸತಕ್ಕದ್ದು ಮತ್ತು ಅದಕ್ಕೆ.–

(ಎ) 17ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದಿಂದ ಸಂಸ್ಥೆಗೆ ನೀಡಲಾದ ಯಾವುದೇ ಅನುದಾನಗಳು ಮತ್ತು ಸಾಲಗಳು;

(ಬಿ) ಈ ಅಧಿನಿಯಮದ ಮೇರೆಗೆ ಸ್ವೀಕರಿಸುವ ಎಲ್ಲಾ ಶುಲ್ಕಗಳು ಮತ್ತು ವೆಚ್ಚಗಳು:

(ಸಿ) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಇತರ ಮೂಲಗಳಿಂದ ಸಂಸ್ಥೆಯು ಸ್ವೀಕರಿಸುವ ಎಲ್ಲಾ ಮೊತ್ತಗಳು

–ಇವುಗಳನ್ನು ಜಮೆ ಮಾಡತಕ್ಕದ್ದು.

(2) ನಿಧಿಯನ್ನು,–

(ಎ) ಸದಸ್ಯರು, ಮಹಾನಿರ್ದೇಶಕ, ಅಧಿಕಾರಿಗಳು ಮತ್ತು ಸಂಸ್ಥೆಯ ಇತರ ನೌಕರರ ವೇತನ, ಭತ್ಯೆಗಳು ಮತ್ತು ಇತರ ಸಂಭಾವನೆಗಳನ್ನು:

(ಬಿ) 10ನೇ ಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಸಂಸ್ಥೆಯ ವೆಚ್ಚಗಳನ್ನು;

(ಸಿ) ಈ ಅಧಿನಿಯಮದಿಂದ ಅಧಿಕೃತಗೊಳಿಸಲಾದ ಧ್ಯೇಯಗಳ ಮೇಲಿನ ಮತ್ತು ಉದ್ದೇಶಗಳ ವೆಚ್ಚಗಳನ್ನು

–ಭರಿಸುವುದಕ್ಕಾಗಿ ಅನ್ವಯಿಸತಕ್ಕದ್ದು.

**19. ಸಂಸ್ಥೆಯು ಸಾಲ ಪಡೆಯುವ ಅಧಿಕಾರಗಳು.–** (1) ಸಂಸ್ಥೆಯು ಕೇಂದ್ರ ಸರ್ಕಾರದ ಸಮ್ಮತಿಯೊಂದಿಗೆ ಅಥವಾ ಕೇಂದ್ರ ಸರ್ಕಾರವು ಅದಕ್ಕೆ ಕೊಟ್ಟ ಯಾವುದೇ ಸಾಮಾನ್ಯ ಅಥವಾ ವಿಶೇಷ ಅಧಿಕಾರದ ನಿಬಂಧನೆಗಳಿಗನುಸಾರವಾಗಿ ಈ ಅಧಿನಿಯಮದ ಮೇರೆಗಿನ ಅದರ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಅದು ಸೂಕ್ತವೆಂದು ಭಾವಿಸುವಂಥ ಯಾವುದೇ ಮೂಲದಿಂದ ಹಣವನ್ನು ಸಾಲ ಪಡೆಯಬಹುದು.

(2) ಕೇಂದ್ರ ಸರ್ಕಾರವು (1)ನೇ ಉಪ–ಪ್ರಕರಣದ ಮೇರೆಗೆ ಸಂಸ್ಥೆಯು ಪಡೆದ ಸಾಲಗಳ ಸಂಬಂಧದಲ್ಲಿ ಅಸಲು ಮತ್ತು ಅದರ ಮೇಲಿನ ಬಡ್ಡಿಯ ಮರು ಸಂದಾಯಕ್ಕೆ ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಖಾತರಿ ನೀಡಬಹುದು.

**20. ಬಜೆಟ್.–** ಸಂಸ್ಥೆಯು ಪ್ರತಿ ಹಣಕಾಸು ವರ್ಷದಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಸಮಯದಲ್ಲಿ ಸಂಸ್ಥೆಯ ಅಂದಾಜು ಜನೆಗಳು ಮತ್ತು ವೆಚ್ಚಗಳನ್ನು ತೋರಿಸುವ ಮುಂದಿನ ಹಣಕಾಸು ವರ್ಷದ ಬಜೆಟನ್ನು ತಯಾರಿಸತಕ್ಕದ್ದು ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**21. ವಾರ್ಷಿಕ ವರದಿ.–** ಸಂಸ್ಥೆಯು ಪ್ರತಿ ಹಣಕಾಸು ವರ್ಷದಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವೇಳೆಯಲ್ಲಿ ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿನ ತನ್ನ ಚಟುವಟಿಕೆಗಳ ಪೂರ್ಣ ವಿವರವನ್ನು ಕೊಡುವ ತನ್ನ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

**22. ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆ.–** 1) ಸಂಸ್ಥೆಯು, ಭಾರತದ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕ ಪರಿಶೋಧಕರೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಯಥೋಚಿತ ಲೆಕ್ಕ ಪತ್ರಗಳನ್ನು ಮತ್ತು ಇತರ ಸುಸಂಬದ್ಧ ದಸ್ತಾವೇಜುಗಳನ್ನು ಇಡತಕ್ಕದ್ದು ಮತ್ತು ಲೆಕ್ಕಗಳ ವಾರ್ಷಿಕ ವಿವರಣೆಯನ್ನು ತಯಾರಿಸತಕ್ಕದ್ದು.

(2) ಸಂಸ್ಥೆಯ ಲೆಕ್ಕಪತ್ರಗಳನ್ನು ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ತಾನು ನಿರ್ದಿಷ್ಟ ಪಡಿಸಬಹುದಾದಂಥ ಅವಧಿಗಳಲ್ಲಿ ಲೆಕ್ಕ ಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ವಹಿಸಲಾದ ಯಾವುದೇ ವೆಚ್ಚವನ್ನು ನಿಯಂತ್ರಕ ಮತ್ತು ಲೆಕ್ಕಪರಿಶೋಧಕನಿಗೆ ಸಂಸ್ಥೆಯು ಸಂದಾಯ ಮಾಡತಕ್ಕದ್ದು.

(3) ಭಾರತದ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕ, ಮತ್ತು ಸಂಸ್ಥೆಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಸರ್ಕಾರಿ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನು ಹೊಂದಿರುವ ಅವೇ ಹಕ್ಕುಗಳು ಮತ್ತು ಸೌಲಭ್ಯಗಳು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಸಂಸ್ಥೆಯ ಪುಸ್ತಕಗಳು, ಲೆಕ್ಕಪತ್ರಗಳು, ಸಂಬಂಧಪಟ್ಟ ಓಚರುಗಳು ಮತ್ತು ಇತರ

ದಸ್ತಾವೇಜುಗಳು ಮತ್ತು ಕಾಗದ ಪತ್ರಗಳ ಹಾಜರಾತಿಯನ್ನು ಕೋರುವ ಮತ್ತು ಸಂಸ್ಥೆಯ ಯಾವುದೇ ಕಚೇರಿಯನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನು ಅಥವಾ ಈ ಸಂಬಂಧವಾಗಿ ಅವನಿಂದ ನೇಮಕಗೊಂಡ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದ ಲೆಕ್ಕಪತ್ರಗಳನ್ನು ಮತ್ತು ಅವುಗಳ ಮೇಲಿನ ಲೆಕ್ಕಪರಿಶೋಧನಾ ವರದಿಯನ್ನು ವರ್ಷಕ್ಕೊಮ್ಮೆ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

**23. ವಾರ್ಷಿಕ ವರದಿಯನ್ನು ಸಂಸತ್ತಿನ ಮುಂದೆ ಇಡುವುದು.–** ಕೇಂದ್ರ ಸರ್ಕಾರವು ವಾರ್ಷಿಕ ವರದಿಯನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ – VII
### ಸಂಕೀರ್ಣ

24. **ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಿಲ್ಲದಂತೆ, ಸಂಸ್ಥೆಯು ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳ ಚಲಾವಣೆಯಲ್ಲಿ ಅಥವಾ ಪ್ರಕಾರ್ಯಗಳ ನಿರ್ವಹಣೆಯಲ್ಲಿ, ಕಾರ್ಯನೀತಿಯ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಅದಕ್ಕೆ ಲಿಖಿತದಲ್ಲಿ ಕೊಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡುವುದಕ್ಕೆ ಮುಂಚೆ, ಸಂಸ್ಥೆಗೆ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಾಧ್ಯವಾದಷ್ಟು ಮಟ್ಟಿಗೆ ಅವಕಾಶವನ್ನು ಕೊಡತಕ್ಕದ್ದು.

(2) ಒಂದು ಪ್ರಶ್ನೆಯು ಕಾರ್ಯನೀತಿಯ ಪ್ರಶ್ನೆಯೇ ಅಥವಾ ಅಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**25. ಪರಿಶೀಲನಾಧಿಕಾರಿ.–** (1) ಸಂಸ್ಥೆಯು, ಮಾನಕ ಗುರುತನ್ನು ಉಪಯೋಗಿಸಿದ ಯಾವುದೇ ವಸ್ತು ಅಥವಾ ಸಂಸ್ಕರಣವು ಭಾರತೀಯ ಮಾನಕಕ್ಕೆ ಅನುರೂಪವಾಗಿದೆಯೇ ಅಥವಾ ಯಾವುದೇ ವಸ್ತು ಅಥವಾ ಸಂಸ್ಕರಣಕ್ಕೆ ಸಂಬಂಧಿಸಿದಂತೆ, ಲೈಸೆನ್ಸ್‌ನೊಂದಿಗೆ ಅಥವಾ ಲೈಸೆನ್ಸ್ ಇಲ್ಲದೆ, ಮಾನಕ ಗುರುತನ್ನು ಸರಿಯಾಗಿ ಉಪಯೋಗಿಸಲಾಗಿದೆಯೇ ಎಂದು ಪರಿಶೀಲಿಸುವ ಉದ್ದೇಶಕ್ಕಾಗಿ ಮತ್ತು ಅವರಿಗೆ ವಹಿಸಿಕೊಡಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ಅಗತ್ಯವಾಗಬಹುದಾದಷ್ಟು ಸಂಖ್ಯೆಯ ಪರಿಶೀಲನಾಧಿಕಾರಿಗಳನ್ನು ನೇಮಕ ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ನಿಯಮಗಳಿಗೆ ಒಳಪಟ್ಟು ಪರಿಶೀಲನಾಧಿಕಾರಿಯು,–

(ಎ) ಮಾನಕ ಗುರುತನ್ನು ಉಪಯೋಗಿಸಲಾದ ಯಾವುದೇ ವಸ್ತು ಅಥವಾ ಸಂಸ್ಕರಣದ ಸಂಬಂಧದಲ್ಲಿ ನಡೆಸಲಾಗುವ ಯಾವುದೇ ಕಾರ್ಯಾಚರಣೆಯನ್ನು ಪರಿಶೀಲಿಸಲು, ಮತ್ತು

(ಬಿ) ಮಾನಕ ಗುರುತನ್ನು ಉಪಯೋಗಿಸಲಾದ ಯಾವುದೇ ವಸ್ತು ಅಥವಾ ಸಂಸ್ಕರಣದಲ್ಲಿ, ಉಪಯೋಗಿಸಲಾದ ಯಾವುದೇ ವಸ್ತು ಅಥವಾ ಯಾವುದೇ ಸಾಮಗ್ರಿ ಅಥವಾ ಪದಾರ್ಥದ ಮಾದರಿಗಳನ್ನು ಪಡೆಯಲು

–ಅಧಿಕಾರವನ್ನು ಹೊಂದಿರತಕ್ಕದ್ದು.

(3) ಪ್ರತಿಯೊಬ್ಬ ಪರಿಶೀಲನಾಧಿಕಾರಿಗೆ, ಸಂಸ್ಥೆಯು, ಪರಿಶೀಲನಾಧಿಕಾರಿಯಾಗಿ ನೇಮಕಾತಿಯ ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ಆ ಪ್ರಮಾಣ ಪತ್ರವನ್ನು ಕೇಳಿದಾಗ, ಪರಿಶೀಲನಾಧಿಕಾರಿಯು ಹಾಜರುಪಡಿಸತಕ್ಕದ್ದು.

**26. ಶೋಧನೆ ಮತ್ತು ಅಭಿಗ್ರಹಣಾಧಿಕಾರ.–** (1) ಯಾವ ವಸ್ತು ಅಥವಾ ಸಂಸ್ಕರಣದ ಸಂಬಂಧದಲ್ಲಿ 11ನೇ ಪ್ರಕರಣ ಅಥವಾ 12ನೇ ಪ್ರಕರಣದ ಉಲ್ಲಂಘನೆಯಾಗಿದೆಯೋ ಆ ಯಾವುದೇ ವಸ್ತು ಅಥವಾ ಸಂಸ್ಕರಣವನ್ನು ಯಾವುದೇ ಸ್ಥಳ. ಆವರಣ ಅಥವಾ ವಾಹನಗಳಲ್ಲಿ ಬಚ್ಚಿಡಲಾಗಿದೆಯೆಂದು ನಂಬಲು ಪರಿಶೀಲನಾಧಿಕಾರಿಗೆ ಕಾರಣವಿದ್ದರೆ, ಅವನು ಅಂಥ ವಸ್ತು ಅಥವಾ ಸಂಸ್ಕರಣಕ್ಕಾಗಿ ಅಂಥ ಸ್ಥಳ, ಆವರಣ ಅಥವಾ ವಾಹನವನ್ನು ಪ್ರವೇಶಿಸಿ ಶೋಧನೆ ನಡೆಸಬಹುದು.

(2) (1)ನೇ ಉಪ–ಪ್ರಕರಣದ ಮೇರೆಗೆ ನಡೆಸಲಾದ ಯಾವುದೇ ಶೋಧನೆಯ ಪರಿಣಾಮವಾಗಿ, ಯಾವ ವಸ್ತು ಅಥವಾ ಸಂಸ್ಕರಣದ ಸಂಬಂಧದಲ್ಲಿ 11ನೇ ಪ್ರಕರಣ ಅಥವಾ 12ನೇ ಪ್ರಕರಣದ ಉಲ್ಲಂಘನೆಯಾಗಿದೆಯೋ ಆ ವಸ್ತು ಅಥವಾ ಸಂಸ್ಕರಣವು ದೊರೆತರೆ, ಅವನು ತನ್ನ ಅಭಿಪ್ರಾಯದಲ್ಲಿ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಗೆ ಉಪಯುಕ್ತವಾಗುವಂಥ ಅಥವಾ ಸುಸಂಬದ್ಧವಾಗುವಂಥ ವಸ್ತು ಅಥವಾ ಇತರೆ ವಸ್ತುಗಳನ್ನು ಅಭಿಗ್ರಹಣಮಾಡಬಹುದು:

ಪರಂತು, ಅಂಥ ವಸ್ತು ಅಥವಾ ಪದಾರ್ಥವನ್ನು ಅಭಿಗ್ರಹಣ ಮಾಡುವುದು ಸಾಧ್ಯವಿಲ್ಲದಿದ್ದ ಸಂದರ್ಭದಲ್ಲಿ ಪರಿಶೀಲನಾಧಿಕಾರಿಯು, ಒಡೆಯನಿಗೆ ಅವನು ಪರಿಶೀಲನಾಧಿಕಾರಿಯ ಪೂರ್ವಾನುಮತಿಯಿಂದ ಹೊರತು ಆ ವಸ್ತು ಅಥವಾ ಪದಾರ್ಥವನ್ನು ಸಾಗಿಸತಕ್ಕದ್ದಲ್ಲ, ಬಿಟ್ಟುಕೊಡತಕ್ಕದ್ದಲ್ಲ ಅಥವಾ ಅನ್ಯಥಾ ವ್ಯಹರಿಸತಕ್ಕದ್ದಲ್ಲ ಎಂಬುದಾಗಿ ಒಂದು ಆದೇಶವನ್ನು ಜಾರಿ ಮಾಡಬಹುದು.

(3) ಶೋಧನೆ ಮತ್ತು ಅಭಿಗ್ರಹಣಕ್ಕೆ ಸಂಬಂಧಿಸಿದ ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2)ರ ಉಪಬಂಧಗಳು, ಸಾಧ್ಯವಾಗುವಷ್ಟರ ಮಟ್ಟಿಗೆ ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಶೋಧನೆ ಅಥವಾ ಅಭಿಗ್ರಹಣಕ್ಕೆ ಅನ್ವಯವಾಗತಕ್ಕದ್ದು.

**27. ಪ್ರತ್ಯಾಯೋಜನೆ.–** ಸಂಸ್ಥೆಯು ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಷರತ್ತುಗಳಿದ್ದರೆ ಅವುಗಳಿಗೆ ಒಳಪಟ್ಟು, ತಾನು ಅಗತ್ಯವೆಂದು ಭಾವಿಸುವಂಥ (38ನೇ ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಹೊರತುಪಡಿಸಿ) ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಯಾರೇ ಸದಸ್ಯನಿಗೆ, ಕಾರ್ಯಕಾರಿ ಸಮಿತಿಯ ಸದಸ್ಯನಿಗೆ, ಸಂಸ್ಥೆಯ ಅಧಿಕಾರಿಗೆ ಅಥವಾ ಇತರ ಯಾರೇ ವ್ಯಕ್ತಿಗೆ ಪ್ರತ್ಯಾಯೋಜಿಸಬಹುದು.

**28. ಮಾಹಿತಿ ಪಡೆಯಲು ಅಧಿಕಾರ.–** ಪ್ರತಿಯೊಬ್ಬ ಲೈಸೆನ್ಸುದಾರನು, ಸಂಸ್ಥೆಗೆ ಸಂಸ್ಥೆಯು ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಮತ್ತು ಯಾವುದೇ ವಸ್ತು ಅಥವಾ ಸಂಸ್ಕರಣದ ಸಂಬಂಧದಲ್ಲಿ

ಉಪಯೋಗಿಸಲಾದ ಯಾವುದೇ ಸಾಮಗ್ರಿ ಅಥವಾ ಪದಾರ್ಥದ ಮಾದರಿಗಳನ್ನು ಸರಬರಾಜು ಮಾಡತಕ್ಕದ್ದು.

**29. ಉಳಿಸುವಿಕೆಗಳು.–** ಈ ಅಧಿನಿಯಮದಲ್ಲಿರುವುದು ಯಾವುದೂ, ಯಾರೇ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗಿನವುಗಳಲ್ಲದೆ ಅವನ ವಿರುದ್ದ ಹೂಡಲ್ಪಡಬಹುದಾದ ಯಾವುದೇ ದಾವೆ ಅಥವಾ ಇತರ ವ್ಯವಹರಣೆಯಿಂದ ವಿನಾಯಿತಿಗೊಳಿಸತಕ್ಕದ್ದಲ್ಲ.

**30. ಕೆಲವು ವಿಷಯಗಳನ್ನು ಗೌಪ್ಯವಾಗಿ ಇಡುವುದು.–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ನೀಡಲಾದ ಯಾವುದೇ ವಿವರಣೆ ಅಥವಾ ಒದಗಿಸಲಾದ ಮಾಹಿತಿ ಅಥವಾ ನೀಡಲಾದ ಯಾವುದೇ ಸಾಕ್ಷ್ಯದಿಂದ ಅಥವಾ ಮಾಡಲಾದ ಪರಿಶೀಲನೆಯಿಂದ ಪರಿಶೀಲನಾಧಿಕಾರಿ ಅಥವಾ ಸಂಸ್ಥೆಯು ಪಡೆದ ಯಾವುದೇ ಮಾಹಿತಿಯನ್ನು ಗೌಪ್ಯವೆಂದು ಪರಿಗಣಿಸತಕ್ಕದ್ದು:

ಪರಂತು ಈ ಪ್ರಕರಣದಲ್ಲಿರುವುದು ಯಾವುದೂ, ಈ ಅಧಿನಿಯಮದ ಮೇರೆಗಿನ ಪ್ರಾಸಿಕ್ಯೂಷನ್ನಿನ ಉದ್ದೇಶಕ್ಕಾಗಿ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸುವುದಕ್ಕೆ ಅನ್ವಯವಾಗತಕ್ಕದ್ದಲ್ಲ.

**31. ಸಂಸ್ಥೆಯ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ಸರ್ಕಾರಿ ನೌಕರರಾಗಿರುವುದು.–** ಸಂಸ್ಥೆಯ ಎಲ್ಲಾ ಸದಸ್ಯರು, ಅಧಿಕಾರಿಗಳು ಮತ್ತು ಇತರ ನೌಕರರನ್ನು ಈ ಅಧಿನಿಯಮದ ಯಾವುದೇ ಉಪಬಂಧದ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿರೆಂದು ತಾತ್ಪರ್ಯವಾಗುವಾಗ ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**32. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ಸಂರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳು ಅಥವಾ ವಿನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಸರ್ಕಾರ ಅಥವಾ ಸರ್ಕಾರದ ಯಾರೇ ಅಧಿಕಾರಿ ಅಥವಾ ಸಂಸ್ಥೆಯ ಯಾರೇ ಸದಸ್ಯ, ಅಧಿಕಾರಿ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**33. ಮಾನಕ ಗುರುತು, ಮುಂತಾದವುಗಳ ಅನುಚಿತ ಬಳಕೆಗೆ ದಂಡ.–** (1) 11ನೇ ಪ್ರಕರಣ ಅಥವಾ 12ನೇ ಪ್ರಕರಣ ಅಥವಾ 14ನೇ ಪ್ರಕರಣ ಅಥವಾ 15ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದು.

(2) (1)ನೇ ಉಪ–ಪ್ರಕರಣದ ಮೇರೆಗಿನ ಉಲ್ಲಂಘನೆಯ ವಿಚಾರಣೆ ನಡೆಸುವ ಯಾವುದೇ ನ್ಯಾಯಾಲಯವು ಯಾವ ಸ್ವತ್ತಿನ ಸಂಬಂಧದಲ್ಲಿ ಉಲ್ಲಂಘನೆಯಾಗಿದೆಯೋ ಆ ಸ್ವತ್ತನ್ನು ಸಂಸ್ಥೆಯು ಮುಟ್ಟುಗೋಲು ಹಾಕಿಕೊಳ್ಳತಕ್ಕದೆಂದು ನಿರ್ದೇಶಿಸಬಹುದು.

**34. ನ್ಯಾಯಾಲಯಗಳಿಂದ ಅಪರಾಧಗಳ ಸಂಜ್ಞಾನ.–** (1) ಯಾವುದೇ ನ್ಯಾಯಾಲಯವು ಸರ್ಕಾರದಿಂದ ಅಥವಾ ಸಂಸ್ಥೆಯಿಂದ ಅಥವಾ ಸರ್ಕಾರದ ಅಥವಾ ಸಂಸ್ಥೆಯ ಪ್ರಾಧಿಕಾರದ ಮೇರೆಗೆ

ಅಥವಾ ಈ ಸಂಬಂಧದಲ್ಲಿ ಸರ್ಕಾರದಿಂದ ಅಥವಾ ಸಂಸ್ಥೆಯಿಂದ ಶಕ್ತಗೊಳಿಸಲಾದ ಯಾರೇ ಅಧಿಕಾರಿಯಿಂದ ಅಥವಾ ಯಾರೇ ಬಳಕೆದಾರನಿಂದ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಈ ಸಂಬಂಧದಲ್ಲಿ ಮನ್ನಣೆ ಪಡೆದ ಯಾವುದೇ ಸಂಘದಿಂದ ಮಾಡಲಾದ ಫಿರ್ಯಾದಿನ ಮೇಲೆ ಹೊರತು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಮಹಾನಗರ ಮ್ಯಾಜಿಸ್ಟ್ರೇಟನ ಅಥವಾ ಈ ಸಂಬಂಧದಲ್ಲಿ ವಿಶೇಷವಾಗಿ ಶಕ್ತಗೊಳಿಸಲಾದ ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕೆಳದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ವಿಚಾರಣೆ ನಡೆಸತಕ್ಕದ್ದಲ್ಲ.

**35. ಕಂಪನಿಗಳ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಒಂದು ಕಂಪನಿಯು ಮಾಡಿದ ಸಂದರ್ಭದಲ್ಲಿ, ಅಪರಾಧವನ್ನು ಮಾಡಿದ ಸಮಯದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ವ್ಯಕ್ತಿ ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕುದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗಲು ಮತ್ತು ತದನುಸಾರ ದಂಡಿತರಾಗಲು ಬದ್ಧರಾಗಿರತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿ ಇರುವುದು ಯಾವುದೂ ಅಂಥ ಯಾರೇ ವ್ಯಕ್ತಿಯನ್ನು-ಅವನು ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲಾ ಯುಕ್ತ ಶ್ರದ್ಧೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುದೇ ದಂಡನೆಗೆ ಗುರಿಯಾಗಲು ಬದ್ಧಗೊಳಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವನ್ನು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಅನುಮತಿ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಸಲಾಗಿದೆಯೆಂದು ಅಥವಾ ಅವರ ಯಾವುದೇ ನಿರ್ಲಕ್ಷ್ಯಕ್ಕೆ ಆರೋಪಿಸಬಹುದಾಗಿದೆ ಎಂದು ರುಜುವಾತು ಪಡಿಸಿದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಕೂಡ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವರ ವಿರುದ್ಧದ ವ್ಯವಹರಣೆಗೆ ಗುರಿಯಾಗಲು ಮತ್ತು ತದನುಸಾರವಾಗಿ ದಂಡಿತರಾಗಲು ಬದ್ಧರಾಗಿರತಕ್ಕದ್ದು.

ವಿವರಣೆ.– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ, ಮತ್ತು

(ಬಿ) ಒಂದು ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ, ಫರ್ಮಿನ ಒಬ್ಬ ಪಾಲುದಾರ.

**36. ಸಂಸ್ಥೆಯ ಆದೇಶಗಳು ಮತ್ತು ಇತರ ಲಿಖಿತ ಅಧಿಪ್ರಮಾಣೀಕರಣ.–** ಸಂಸ್ಥೆಯು ಎಲ್ಲಾ ಆದೇಶಗಳು ಮತ್ತು ನಿರ್ಣಯಗಳು ಮತ್ತು ಸಂಸ್ಥೆಯು ಹೊರಡಿಸಿದ ಇತರ ಎಲ್ಲಾ ಲಿಖಿತಗಳನ್ನು ಈ

ಸಂಬಂಧದಲ್ಲಿ ಸಂಸ್ಥೆಯು ಅಧಿಕೃತಗೊಳಿಸಿದ ಅಧಿಕಾರಿಯ ಅಥವಾ ಅಧಿಕಾರಿಗಳ ಸಹಿಯಿಂದ ಅಧಿಪ್ರಮಾಣೀಕರಿಸತಕ್ಕದ್ದು.

**37. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷತಃ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:–

(ಎ) 3ನೇ ಪ್ರಕರಣದ (3)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ಸಂಸ್ಥೆಯ ಸದಸ್ಯರ ಸಂಖ್ಯೆ ಮತ್ತು ಅಂಥ ಸದಸ್ಯರು ಪ್ರತಿನಿಧಿಸುವ ಹಿತಾಸಕ್ತಿ;

(ಬಿ) ಸಂಸ್ಥೆಯ ಸದಸ್ಯರ ಪದಾವಧಿ, ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ವಿಧಾನ ಮತ್ತು 3ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗಿನ ಆ ಸದಸ್ಯರು ತಮ್ಮ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಸಿ) 3ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ಸಂಸ್ಥೆಯು ಸಹಾಯ ಮತ್ತು ಸಲಹೆಗಾಗಿ ತನ್ನೊಂದಿಗೆ ಯಾರೇ ವ್ಯಕ್ತಿಯನ್ನು ಸಹಯೋಜಿಸಿಕೊಳ್ಳಬಹುದಾದ ರೀತಿ ಮತ್ತು ಉದ್ದೇಶಗಳು;

(ಡಿ) 4ನೇ ಪ್ರಕರಣದ (1)ನೇ ಉಪ–ಪ್ರಕರಣದ (ಬಿ) ಖಂಡದ ಮೇರೆಗೆ ಕಾರ್ಯಕಾರಿ ಸಮಿತಿಯ ಸದಸ್ಯರಾಗಬೇಕಾದ ಸಂಸ್ಥೆಯ ಸದಸ್ಯರ ಸಂಖ್ಯೆ;

(ಇ) 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಂಸ್ಥೆಯ ಮಹಾ–ನಿರ್ದೇಶಕನ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಎಫ್) 10ನೇ ಪ್ರಕರಣದ (1)ನೇ ಉಪ–ಪ್ರಕರಣದ (ಸಿ) ಖಂಡದ ಮೇರೆಗೆ ಒಂದು ನಿರ್ದಿಷ್ಟ ಭಾರತೀಯ ಮಾನಕವನ್ನು ಪ್ರತಿನಿಧಿಸುವ ವಿನ್ಯಾಸ ಮತ್ತು ವಿವರಗಳು;

(ಜಿ) 10ನೇ ಪ್ರಕರಣದ (1)ನೇ ಉಪಪ್ರಕರಣದ (ಹೆಚ್) ಖಂಡದ ಮೇರೆಗೆ ಸಂಸ್ಥೆಯು ಮಾನಕೀಕರಣ ಮತ್ತು ಗುಣನಿಯಂತ್ರಣದ ಉದ್ದೇಶಗಳಿಗಾಗಿ ಪ್ರಯೋಗಶಾಲೆಗಳನ್ನು ಸ್ಥಾಪಿಸುವ ಉದ್ದೇಶಗಳು;

(ಹೆಚ್) 10ನೇ ಪ್ರಕರಣದ (1)ನೇ ಉಪಪ್ರಕರಣದ (ಎಲ್) ಖಂಡದ ಮೇರೆಗೆ, ಭಾರತದಲ್ಲಿ ಅಥವಾ ಭಾರತದ ಹೊರಗೆ ಸಂಸ್ಥೆಯು ಏಜೆಂಟರನ್ನು ನೇಮಕ ಮಾಡಬಹುದಾದ ಉದ್ದೇಶಗಳು;

(ಐ)10ನೇ ಪ್ರಕರಣದ (1)ನೇ ಉಪಪ್ರಕರಣದ (ಎನ್) ಖಂಡದ ಮೇರೆಗೆ ಯಾವುದೇ ವಸ್ತು ಅಥವಾ ಸಂಸ್ಕರಣವನ್ನು ಪರಿಶೀಲಿಸಬಹುದಾದ ಸಮಯ ಮತ್ತು ಸ್ಥಳಗಳು;

(ಜೆ)10ನೇ ಪ್ರಕರಣದ ಮೇರೆಗೆ ಸಂಸ್ಥೆಯು ನಿರ್ವಹಿಸಬಹುದಾದ ಹೆಚ್ಚಿನ ಪ್ರಕಾರ್ಯಗಳು;

(ಕೆ) 12ನೇ ಪ್ರಕರಣದ ಮೇರೆಗೆ ಯಾವ ಪ್ರಕರಣಗಳಲ್ಲಿ ಮತ್ತು ಯಾವ ಷರತ್ತುಗಳಿಗೊಳಪಟ್ಟು ವಿನಾಯಿತಿ ನೀಡಬಹುದೋ ಅವು;

(ಎಲ್) ಸಂಸ್ಥೆಯು 20ನೇ ಪ್ರಕರಣದ ಮೇರೆಗೆ ಅದರ ಬಜೆಟನ್ನು ಮತ್ತು 21ನೇ ಪ್ರಕರಣದ ಮೇರೆಗೆ ಅದರ ವಾರ್ಷಿಕ ವರದಿಯನ್ನು ತಯಾರಿಸತಕ್ಕ ನಮೂನೆ ಮತ್ತು ಸಮಯ;

(ಎಂ) 22ನೇ ಪ್ರಕರಣದ ಮೇರೆಗೆ ಸಂಸ್ಥೆಯ ಲೆಕ್ಕಪತ್ರಗಳನ್ನು ಇಡತಕ್ಕ ರೀತಿ;

(ಎನ್) 22ನೇ (2)ನೇ ಉಪಪ್ರಕರಣದ ಮೇರೆಗೆ ಪರಿಶೀಲನಾಧಿಕಾರಿಯು ಯಾವ ಷರತ್ತುಗಳಿಗೊಳಪಟ್ಟು ತನ್ನ ಅಧಿಕಾರಗಳನ್ನು ಚಲಾಯಿಸಬಹುದೋ ಆ ಷರತ್ತುಗಳು;

(ಓ) ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ಬಹುದಾದ ಅಥವಾ ಯಾವುದರ ಸಂಬಂಧವಾಗಿ ಉಪಬಂಧವನ್ನು ರಚಿಸಬೇಕಾಗಿದೆಯೋ ಅಥವಾ ರಚಿಸಬಹುದಾಗಿದೆಯೋ ಆ ಯಾವುದೇ ಇತರ ವಿಷಯ.

**38. ವಿನಿಯಮ ರಚನಾಧಿಕಾರ.–** (1) ಕಾರ್ಯಕಾರಿ ಸಮಿತಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಸಾಮಾನ್ಯವಾಗಿ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಈ ಅಧಿನಿಯಮ ಮತ್ತು ನಿಯಮಗಳಿಗೆ ಸುಸಂಗತವಾದ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷತಃ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ವಿನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:–

(ಎ) 5ನೇ ಪ್ರಕರಣದ ಮೇರೆಗೆ ರಚಿಸಲಾದ ಸಲಹಾ ಸಮಿತಿಗಳ ಸದಸ್ಯರು;

(ಬಿ) 7ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಸಂಸ್ಥೆಯ ಮಹಾ ನಿರ್ದೇಶಕನು ಚಲಾಯಿಸಬಹುದಾದ ಮತ್ತು ನಿರ್ವಹಿಸಬಹುದಾದ ಅಧಿಕಾರಗಳು ಮತ್ತು ಕರ್ತವ್ಯಗಳು;

(ಸಿ) 8ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಂಸ್ಥೆಯ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಡಿ) 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೆಸೆನ್ಸಿನ ಮಂಜೂರಾತಿ, ನವೀಕರಣೆ, ಅಮಾನತು ಅಥವಾ ರದ್ದಿಯಾತಿ ಇವುಗಳ ರೀತಿ;

(ಇ) 15ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಯಾವ ಷರತ್ತುಗಳಿಗೊಳಪಟ್ಟು ಲೈಸೆನ್ಸನ್ನು ನೀಡಬಹುದೋ ಅಥವಾ ನವೀಕರಿಸಬಹುದೋ ಆ ಷರತ್ತುಗಳು ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಶುಲ್ಕ.

**39. ನಿಯಮಗಳನ್ನು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.–** ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಎರಡು ಅಥವಾ ಅದಕ್ಕಿಂತ ಹೆಚ್ಚು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು

ಹಿಂದೆ ಹೇಳಿದ ಅಧಿವೇಶನ ಅಥವಾ ಅನುಕ್ರಮ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಎರಡೂ ಸದನಗಳು ಆ ನಿಯಮದಲ್ಲಿ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಒಪ್ಪಿದರೆ ಅಥವಾ ಎರಡೂ ಸದನಗಳು ಆ ನಿಯಮವನ್ನು ಅಥವಾ ವಿನಿಯಮವನ್ನು ಮಾಡಕೂಡದೆಂದು ಒಪ್ಪಿದರೆ, ಆ ತರುವಾಯ ಆ ನಿಯಮ ಅಥವಾ ವಿನಿಯಮವು, ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮ ಅಥವಾ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**40. ಅಧಿನಿಯಮವು ಕೆಲವು ಅಧಿನಿಯಮಗಳ ಪ್ರವರ್ತನೆಗೆ ಬಾಧಕವಾಗದಿರುವುದು.–** ಈ ಅಧಿನಿಯಮದಲ್ಲಿರುವುದು ಯಾವುದೂ, ಯಾವುದೇ ವಸ್ತು ಅಥವಾ ಸಂಸ್ಕರಣದ ಯಾವುದೇ ಮಾನಕೀಕರಣ ಅಥವಾ ಗುಣ ನಿಯಂತ್ರಣ ಇವುಗಳನ್ನು ವ್ಯವಹರಿಸುವ ಕೃಷಿ ಉತ್ಪನ್ನ (ಶ್ರೇಣೀಕರಿಸುವ ಮತ್ತು ಗುರುತು ಹಾಕುವ) ಅಧಿನಿಯಮ, 1937 (1937ರ 1) ರ ಅಥವಾ ಔಷಧಗಳು ಮತ್ತು ಪ್ರಸಾಧನಗಳ ಅಧಿನಿಯಮ, 1940 (1940ರ 23) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರವರ್ತನೆಗೆ ಬಾಧಕವಾಗತಕ್ಕದ್ದಲ್ಲ.

**41. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸಲು ಅಗತ್ಯವೆಂದು ಕಂಡುಬರುವಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಐದು ವರ್ಷಗಳು ಮುಗಿದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**42. ನಿರಸನ ಮತ್ತು ಉಳಿಸುವಿಕೆ.–** (1) ಭಾರತೀಯ ಮಾನಕಗಳ ಸಂಸ್ಥೆ (ಪ್ರಮಾಣೀಕರಣ ಗುರುತುಗಳ)ಅಧಿನಿಯಮ, 1952 (1952ರ 36) ಇದು ಈ ಮೂಲಕ ನಿರಸಿತವಾಗಿದೆ.

(2) ಅಂತ ನಿರಸನವೇನೇ ಇದ್ದರೂ, ಈ ಮೂಲಕ ನಿರಸಿತವಾದ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕ್ರಮವನ್ನು (ಮಾಡಲಾದ, ಹೊರಡಿಸಲಾದ ಅಥವಾ ಅಳವಡಿಸಲಾದ ಯಾವುದೇ ನಿಯಮ, ವಿನಿಯಮ, ಅಧಿಸೂಚನೆ, ಯೋಜನೆ, ನಿರ್ದಿಷ್ಟ ವಿವರ, ಭಾರತೀಯ ಮಾನಕ, ಮಾನಕ ಗುರುತು, ಪರಿಶೀಲನಾದೇಶ ಅಥವಾ ನೋಟೀಸು ಅಥವಾ ಮಾಡಲಾದ ಯಾವುದೇ ನೇಮಕಾತಿ ಅಥವಾ ಘೋಷಣೆ ಅಥವಾ ನೀಡಲಾದ ಯಾವುದೇ ಲೈಸೆನ್ಸು, ಅನುಮತಿ, ಪ್ರಾಧಿಕಾರ ಅಥವಾ ವಿನಾಯಿತಿ ಅಥವಾ ಬರೆದುಕೊಟ್ಟ ಯಾವುದೇ ದಸ್ತಾವೇಜು ಅಥವಾ ಲಿಖಿತ ಅಥವಾ ನೀಡಲಾದ ನಿರ್ದೇಶನ ಅಥವಾ

ಕೈಗೊಳ್ಳಲಾದ ಯಾವುವೇ ವ್ಯವಹರಣೆಗಳು ಅಥವಾ ವಿಧಿಸಲಾದ ಯಾವುದೇ ದಂಡ ಅಥವಾ ಜುಲ್ಮಾನೆ ಇವುಗಳು ಸೇರಿ), ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದಿರುವಷ್ಟು ಮಟ್ಟಿಗೆ, ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

(3) ನಿರಸನದ ಪರಿಣಾಮಕ್ಕೆ ಸಂಬಂಧಿಸಿದಂತೆ, (2) ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟ ವಿಷಯಗಳ ಉಲ್ಲೇಖವು ಸಾಮಾನ್ಯ ಖಂಡಗಳ ಅಧಿನಿಯಮ, 1897 (1897 ರ 10) 6ನೇ ಪ್ರಕರಣದ ಸಾಮಾನ್ಯನ್ವಯಕ್ಕೆ ಪ್ರತಿಕೂಲ ಪ್ರಭಾವ ಉಂಟುಮಾಡುವುದೆಂದು ಅಥವಾ ಬಾಧಕವಾಗುವುದೆಂದು ತೀರ್ಮಾನಿಸತಕ್ಕದ್ದಲ್ಲ.